ತೀರ್ಮಾನವನ್ನು ಹೇಳದೇ ಇದ್ದರೆ ಅಲ್ಲಿಯ ಜನರು ಕಂಗಾಲಾಗುತ್ತಾರೆ ತಾವು ಅವರನ್ನು ಕರೆಸಿ ಮಾತನಾಡಬೇಕು

ಅಧ್ಯಕ್ಷರು ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು brief ಆಗಿ ಮಾತನಾಡಿ ಇವತ್ತು ಚರ್ಚೆಯು ಮುಕ್ತಾಯವಾಗಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಅಂತು ಮುಕ್ತಾಯ ಮಾಡುತ್ತೇನೆ

ಅಧ್ಯಕ್ಷರು ಚರ್ಚೆಯಾದ ನಂತರ ಸರ್ಕಾರದಿಂದ ಉತ್ತರ ಇವೆಲ್ಲ ಆಗಬೇಕು

ಇ) ವಿಷಯ ಕಾವೇರಿ ನ್ಯಾಯ ಮಂಡಳಿ ತೀರ್ಪಿನ ಬಗ್ಗೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಸನ್ಮಾನ್ಯ ಅಧ್ಯಕ್ಷರೇ, ಈ ಕಾವೇರಿಯ ವಿಚಾರ ನಮ್ಮ ಸದನದಲ್ಲಿ ಚರ್ಚೆಯಾಗತಕ್ಕಂಥದ್ದು, ನಮ್ಮ ಸದನ ಕಾವೇರಿ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ವ್ಯಯ ಮಾಡಿರುವಂತಹ ಸಮಯ ಬಹುಶ ನಮ್ಮ ರಾಜ್ಯದ ಯಾವುದೇ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನಮ್ಮ ಸದನದಲ್ಲಿ ವಿನಿಯೋಗಿಸಿಲ್ಲ ಅದು ಇವತ್ತಿನದಲ್ಲ, ಪ್ರಾರಂಭದಿಂದಲೂ ಕಾವೇರಿ ವಿಚಾರ ಪ್ರಸ್ತಾಪ ಅಗಿರುವುದನ್ನು ತೆಗೆದುಕೊಂಡರೆ ಇಷ್ಟು ಸಮಯವನ್ನು ಬೇರೆ ಯಾವುದಕ್ಕೂ ನಾವು ವಿನಿಯೋಗಿಸಿಲ್ಲ ಅಷ್ಟು ಚರ್ಚೆಯಾಗಿದೆ, ಅಷ್ಟು ನಿರ್ಣಯಗಳು ಆಗಿದೆ ಅಷ್ಟೆಲ್ಲಾ ತೀರ್ಮಾನಗಳು ಆಗಿದೆ ಆದರೂ ಕೂಡ ಕಾವೇರಿ ವಿಚಾರ ಇನ್ನು ಮುಗಿದಿಲ್ಲ ಅದು ಮುಗಿಯುವುದಿಲ್ಲ, ಏಕೆಂದರೆ, ಅಂತರ್‌ರಾಜ್ಯ ನದಿನೀರಿನ ವಿವಾದಗಳು ಏನಿದೆ, ಇವು ಭಾರಿ ಸೂಕ್ಷ್ಮವಾದಂತಹ ವಿಚಾರಗಳು ವಾಸ್ತವಿಕ ನೆಲೆಗಟ್ಟಿನಲ್ಲಿ ಈ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಬೇಕೇ ಹೊರತು, ಯಾವುದೇ ಒಂದು ರಾಜ್ಯ ನೀರಿನ ಹಾಗೂ ಗಡಿಯ ವಿಚಾರದಲ್ಲಿ ಭಾವನಾತ್ಮಕವಾದ ಭಾವನೆಗಳಿಗೆ ಒಳಗಾಗಬಾರದು ಭಾವನಾತ್ಮಕವಾದಂತಹ ವಿಚಾರಗಳನ್ನು ಚರ್ಚೆ ಮಾಡಬಾರದು ಏಕೆಂದರೆ, ನಾವು ಒಕ್ಕೂಟ ವ್ಯವಸ್ಥೆಯಲ್ಲಿರುವಂತಹ ಜನರಾಗಿದ್ದೇವೆ ನಮ್ಮದು ಒಕ್ಕೂಟ ವ್ಯವಸ್ಥೆಯಾಗಿದೆ ಈ ಒಕ್ಕೂಟ ವ್ಯವಸ್ಥೆ ಎಂದರೆ, ಮೊದಲು ಭಾರತದೇಶ ನಮ್ಮದು ಆಮೇಲೆ ಬೇರೆ ರಾಜ್ಯಗಳದು, ಈ ಒಕ್ಕೂಟ ವ್ಯವಸ್ಥೆಯನ್ನು ನಾವು ಎಲ್ಲಿಯವರೆಗೆ ಒಪ್ಪಿಕೊಂಡಿರುತ್ತೇವೆಯೋ ಅಲ್ಲಿಯವರೆವಿಗೂ ಯಾವುದೇ ಕಾರಣಕ್ಕೂ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬರದಂತಹ ರೀತಿಯಲ್ಲಿ ನೋಡಿಕೊಳ್ಳಬೇಕಾಗಿರುವಂಥದ್ದು ನಮ್ಮೆಲ್ಲರ ಪ್ರಥಮ ಜವಾಬ್ದಾರಿಯಾಗಿದೆ ಇನ್ನು ಎರಡನೆಯದಾಗಿ ಹೇಳುವುದಾದರೆ, ಯಾವುದೇ ಒಂದು ಸಮಸ್ಯೆಯ

ಬಗ್ಗೆ ಎರಡು ರಾಜ್ಯಗಳ ಮಧ್ಯೆ ಸಮಸ್ಯೆಯು ಉದ್ಭವವಾಗುವಂತಹ ಸಂದರ್ಭದಲ್ಲಿ ನಾವು ಆ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ, ಒಂದು ಮಾತುಕತೆಗಳ ಮೂಲಕ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಬೇಕು ಅದೇ ಬಹಳ ಒಳ್ಳೆಯ ವಿಧಾನ ಮತ್ತು ಸಾಧ್ಯವಾದಷ್ಟು ಅದರ ಮೇಲೆ ಅವಲಂಬಿತರಾಗಬೇಕಾಗುತ್ತದೆ ಅದು ಅಗುವುದೇ ಇಲ್ಲವೆಂಬ ಪರಿಸ್ಥಿತಿ ಬಂದಾಗ ನಾವು ಯಾವುದಾದರೂ ಕಾನೂನಿನ ಮೊರೆಯನ್ನು ಹೋಗಬೇಕಾಗುತ್ತದೆ ಇದನ್ನು ಬಿಟ್ಟು ಬೇರೆ ದಾರಿಯಿಲ್ಲ, ದಾರಿ ಇದ್ದರೆ ಅದರ ಬಗ್ಗೆ ತಜ್ಞರು ಯಾರಾದರೂ ಇದ್ದರೆ ದಯವಿಟ್ಟು ಹೇಳಲಿ ಎರಡೇ ದಾರಿಗಳು ಇರುವುದು, ಒಂದು ದಾರಿಯನ್ನು ನಾವು ಮುಚ್ಚಿಹಾಕಿಬಿಟ್ಟಿದ್ದೇವೆ, ಒಂದು ಬಾಗಿಲನ್ನು ಮುಚ್ಚಿಹಾಕಿದ್ದೇವೆ ನಮಗೆ ಇದ್ದದ್ದು ಒಂದೇ ಬಾಗಿಲು ಅದು ಕಾನೂನಿನ ಬಾಗಿಲು, ಈ ಕಾನೂನು ಸರಿಯೋ, ತಪ್ಪೋ, ತೀರ್ಪನ್ನು ಕೊಟ್ಟಿದೆ ಅದರ ಬಗ್ಗೆ ಮತ್ತೆ ಮಾತನಾಡೋಣ ಅದು ಸರಿಯೋ, ತಪ್ಪೋ, ಕೊಟ್ಟಿರುವಂತಹ ತೀರ್ಪಿನ ಬಗ್ಗೆ ಆ ಮೇಲೆ ಹೇಳೋಣ ತೀರ್ಪು ಕೊಟ್ಟಮೇಲೆ ಅ ತೀರ್ಪಿನ ಬಗ್ಗೆ ನಮ್ಮ ವ್ಯಾಖ್ಯಾನಗಳು ಯಾವ ರೀತಿಯಲ್ಲಿ ಬರುತ್ತದೆ ಎಂದರೆ, ಆ ತೀರ್ಪುಗಳನ್ನು ನಾವು ಜಾರಿ ಮಾಡುವುದಿಲ್ಲವೇನೋ ಎನ್ನುವಂತಹ ಪರಿಸ್ಥಿತಿಯು ನಿರ್ಮಾಣವಾಗುತ್ತದೆನ್ನುವಂತಹ ರೀತಿಯಲ್ಲಿ ವ್ಯಾಖ್ಯಾನಗಳು ಆಗುತ್ತದೆ ಮೊನ್ನೆ ಸರ್ವಪಕ್ಷಗಳ ಸಭೆಯು ನಡೆದಂತಹ ಸಂದರ್ಭದಲ್ಲಿ ನಮ್ಮ ಪರವಾಗಿ ವಾದ ಮಾಡಿರುವಂತಹ ವಕೀಲರುಗಳು ಒಂದು ಅಭಿಪ್ರಾಯವನ್ನು ಹೇಳಿದರು ಅಗ ನಾವೆಲ್ಲರೂ ಅಲ್ಲಿ ಇದ್ದೆವು ಅವರು ವಾದ ಮಾಡುವಾಗ ಸುಪ್ರೀಂಕೋರ್ಟಿನವರು ಕೇಳಿದರಂತೆ, ಕರ್ನಾಟಕದವರಿಗೆ ಯಾವ ತೀರ್ಪನ್ನು ಕೊಟ್ಟರೆ ನೀವು ಪಾಲಿಸುತ್ತೀರಿ, ಅದರ ಬಗ್ಗೆ ಹೇಳಿ ಎಂದು ಹೇಳಿದರಂತೆ The Supreme Court has asked directly in the Court Hall which judgment you will follow? ನಮ್ಮ ಬಗ್ಗೆ ಯಾವ ರೀತಿಯಾದ ಅಭಿಪ್ರಾಯ ಬಂದಿದೆ ಎಂದರೆ ಅದನ್ನು ತಾವು ಗಮನಿಸಬೇಕಾಗುತ್ತದೆ ಏಕೆ ನಾವು ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದೇವೆ ಇವತ್ತು ಕಾವೇರಿ ವಿಚಾರವನ್ನು ತೆಗೆದುಕೊಂಡರೆ ಇದರಲ್ಲಿ ನಮ್ಮದು ಸ್ವಯಂಕೃತ ಅಪರಾಧವು ಕೂಡ ಇದೆ ಈ ಕಾವೇರಿ ವಿವಾದ ಈ ಸ್ಥಿತಿಗೆ ಬರುವುದಕ್ಕೆ ನಮ್ಮ ಸ್ವಯಂಕೃತ ಅಪರಾಧ ಇದೆ ಎಂಬುದನ್ನು ನಾವು ಬಚ್ಚಿಡಬಾರದು ಇದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ ಏನು ಸ್ವಯಂಕೃತವಾದ ಅಪರಾಧ? ಅದು ಇವತ್ತು

ನಡೆಯುವಂತಹ ಸ್ವಯಂಕೃತವಾದ ಅಪರಾಧವಲ್ಲ, ನಾವು ಪ್ರಾರಂಭದಿಂದಲೂ ಕಾವೇರಿ ನದಿಯ ನೀರನ್ನು ಬಳಸಿಕೊಳ್ಳುವುದರಲ್ಲಿ ಅತೀವ ನಿರ್ಲಕ್ಷ್ಯವನ್ನು ತೋರಿದ್ದೇವೆ ನಾವು ಕಾವೇರಿ ನೀರನ್ನು ಹೇಗೆ ಬಳಸಿಕೊಳ್ಳಬೇಕಾಗಿತ್ತೋ, ಅದನ್ನು ಬಳಸಿಕೊಳ್ಳುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೇವೆ 1924ನೇ ಇಸವಿಯವರೆವಿಗೂ ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿ ನಾವು ನೀರಾವರಿಯನ್ನು ಮಾಡಬೇಕೆಂಬ ಅಲೋಚನೆಯು ಬರಲೇ ಇಲ್ಲ ಆದರೆ ಅದಕ್ಕೆ ತದ್ವವಿದ್ದವಾಗಿ ಶ್ರೀ ಕರಿಕಾಳಚೋಳನ್ 600 ವರ್ಷಗಳ ಹಿಂದೆ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೆಯನ್ನು ಕಟ್ಟಿ ನೀರಾವರಿಯನ್ನು ಪ್ರಾರಂಭ ಮಾಡಿದ್ದ ಈ ಬಗ್ಗೆ ನೀವು ಇತಿಹಾಸವನ್ನು ತೆಗೆದು ನೋಡಬೇಕು ಆದರೆ ನಮ್ಮಲ್ಲಿ ಶ್ರೀ ವಿಶ್ವೇಶ್ವರಯ್ಯನವರು 1924ನೇ ಇಸವಿಯವರೆಗೆ ಕನ್ನಂಬಾಡಿ ಕಟ್ಟೆಯವರೆಗೂ ನಾವು ಆಲೋಚನೆಯನ್ನು ಮಾಡಲೇ ಇಲ್ಲ ಆಮೇಲೆ ನಾವು ಏನು ಮಾಡಿದೆವು? ನಮಗೆ ವಾಸ್ತವವಾಗಿ ಕಾವೇರಿ ನದಿ ಪಾತ್ರದಲ್ಲಿರತಕ್ಕಂತಹ ನೀರನ್ನು ಉಪಯೋಗಿಸಿಕೊಳ್ಳತಕ್ಕಂತಹ ರೀತಿಯಲ್ಲಿ ಕರ್ನಾಟಕ ರಾಜ್ಯ ಯಾವುದೇ ಯೋಜನೆಗಳನ್ನು ರೂಪಿಸಲೇ ಇಲ್ಲ ಯೋಜನಾ ಆಯೋಗದ ಮುಂದೆ ಹೋಗಿ ಅನುಮತಿಯನ್ನು ಪಡೆದುಕೊಳ್ಳುವುದಕ್ಕೆ ಅಗಲಿಲ್ಲ ಅಣೆಕಟ್ಟೆಯನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಲಿಲ್ಲ ಹಾಗಾಗಿ ಏನಾಯಿತು? ನಮ್ಮ ನೀರು ಎಲ್ಲವೂ ಹರಿದುಹೊಯಿತು ನಾವು ಕನ್ನಂಬಾಡಿ ಕಟ್ಟಿಯನ್ನು ಕಟ್ಟುವ ಹೊತ್ತಿಗೆ ತಮಿಳುನಾಡಿನವರು ಅವರ ಭಾಗದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಬೇಕಾಗಿರುವಂತಹ ಎಲ್ಲಾ ಅಣೆಕಟ್ಟುಗಳನ್ನು ಕಟ್ಟಿಬಿಟ್ಟಿದ್ದರು ಹಾಗಾಗಿ ನಾವು ಇವತ್ತು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದೇವೆ, ಅದು ಒಂದನೇ ಪಾಯಿಂಟ್ ತಾವು ಇದನ್ನು ಗಮನದಲ್ಲಿಡಬೇಕು, ಅಮೇಲೆ ನಾವು ಈ ಬಗ್ಗೆ ಎಚ್ಚೆತ್ತುಕೊಂಡಿದ್ದು, ಎಚ್ಚೆತ್ತುಕೊಂಡು ಕಟ್ಟುವುದಕ್ಕೆ ಪ್ರಾರಂಭ ಮಾಡಿದೆವು, ಕಬಿನಿ, ಹೇಮಾವತಿ, ಹಾರಂಗಿ ಇವುಗಳನ್ನು ಕಟ್ಟಿದೆವು, ಅದರ ಬಗ್ಗೆ ಯಾವ Planning Commission permission ಇಲ್ಲ CWC permisson ಇಲ್ಲ ಅಣೆಕಟ್ಟನ್ನು ಕಟ್ಟಿದೆವು ಅದನ್ನು ಕಟ್ಟಿದ ಮೇಲೂ ನಾವು ಏನು ಮಾಡಿದ್ದೇವೆಂದರೆ, ಅದನ್ನು ಕಟ್ಟಿದ ಮೇಲೆಯೂ ಕೂಡ ಅದಕ್ಕೆ ನ್ಯಾಯವನ್ನು ಒದಗಿಸಲಿಲ್ಲ ಇವತ್ತು ಇರುವಂತಹ ಕಬಿನಿ ನದಿ ಏನಿದೆ, ಡ್ಯಾಂ, ಎಲ್ಲಿ ಅದನ್ನು ಓರಿಜಿನಲ್ ಆಗಿ ಕಟ್ಟಬೇಕಾಗಿತ್ತು, ಅದರ ಬಗ್ಗೆ ಪ್ಲಾನ್ ಮಾಡಿದ್ದು ಎಲ್ಲಿ, ಸರಗೂರು ಹತ್ತಿರ ಸರಗೂರು ಹತ್ತಿರ ಅ ಬಗ್ಗೆ ಪ್ಲಾನ್ ಮಾಡಿ ಆ ಪ್ಲಾನ್ ಪ್ರಕಾರ ಅಲ್ಲಿ

ಸಿ/೨೩

ಕಟ್ಟಿದ್ದರೆ 59 ಟಿಎಂಸಿ ನೀರು ಅಲ್ಲಿ ಶೇಖರಣೆಯಾಗುತ್ತಿತ್ತು ಆದರೆ ಯಾವುದೋ ಒಂದು ಕ್ಷುಲ್ಲಕ ಕಾರಣಕೋಸ್ಕರ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ ಅದನ್ನು ಹೇಳುವುದಕ್ಕೆ ಹೋದರೆ ಇಲ್ಲಿ ಗದ್ದಲಗಳು ನಡೆದುಹೋಗುತ್ತದೆ ಅದರ ಬಗ್ಗೆ ಸತ್ಯವೇನೆಂದು ನನಗೆ ಗೊತ್ತಿದೆ ಯಾವುದೋ ಒಂದು ಕ್ಷುಲ್ಲಕ ಕಾರಣಕೋಸ್ಕರ, ಯಾರದೋ ಒಂದು ಹಿತವನ್ನು ರಕ್ಷಣೆ ಮಾಡುವುದಕ್ಕೋಸ್ಕರ ಸರಗೂರಿನಿಂದ ಬದಲಾವಣೆ ಮಾಡಿ ಅಣೆಕಟ್ಟನ್ನು ಹೆಚ್ ಡಿ ಕೋಟೆಗೆ ತಂದರು ಅದರ ಪರಿಣಾಮವೇನಾಯಿತು? 59 ಟಿಎಂಸಿ ನೀರು ಹಿಡಿಸಬಹುದಾದಂತಹ ಪ್ರಾಜೆಕ್ಟ್‌ನ್ನು 19 ಟಿಎಂಸಿಗೆ ಇಳಿಸಿದ್ದೀರಿ ಅವತ್ತು 59 ಟಎಂಸಿಗೆ ಅಣೆಕಟ್ಟು ಕಟ್ಟಿದ್ದರೆ, ಇವತ್ತು ಅಂತರ್‌ರಾಷ್ಟ್ರೀಯ ನದಿ ನೀರು ಹಂಚಿಕೆಯ ವಿವಾದದ ಕಾನೂನು ನಮಗೆ ರಕ್ಷಣೆಗೆ ಬರುತ್ತಿತ್ತು ಆ ಕಾನೂನು ಏನು ಹೇಳುತ್ತದೆ, existing cropನ್ನು ನೀವು ರಕ್ಷಣೆ ಮಾಡಲೇಬೇಕು It is your bounden duty That is the principle the tribunal has adopted. ಹೇಮಾವತಿಯನ್ನು ಎಲ್ಲಿ ಕಟ್ಟಬೇಕಾಗಿತ್ತು? ನಮ್ಮ ರಾಮಸ್ವಾಮಿಯವರು ಇದ್ದಾರೆ, ಅವರಿಗೆ ಗೊತ್ತಿರಬಹುದು ಎಂದು ಕಾಣುತ್ತದೆ ಗೊರೂರು ಮುಳುಗುತ್ತದೆ ಎಂದು ಒಂದೇ ಒಂದು ಕಾರಣಕೋಸ್ಕರ ಅದನ್ನು ತಪ್ಪಿಸಬೇಕೆಂದು ಅಲ್ಲಿಂದ ತೆಗೆದುಕೊಂಡು ಹೋಗಿ ಅರಕಲಗೂಡಿನ ಹತ್ತಿರ ಹಾಕಿದರು ಇದರ ಪರಿಣಾಮವೇನಾಯಿತು? 50 % ನೀರನ್ನು ಅದರಲ್ಲಿ store ಮಾಡುವುದಕ್ಕೆ ಆಗಲಿಲ್ಲ ಗೊರೂರು ಮುಳುಗಬಾರದು ಎಂದು ಹೇಳಿ, ಅದರ ಗಾತ್ರವನ್ನು ಕಡಿಮೆ ಮಾಡಿದರು ಅದನ್ನು ಸರಿಯಾದ ರೀತಿಯಲ್ಲಿ ಕಟ್ಟಿದ್ದರೆ ಇವತ್ತು ಇಡೀ ತುಮಕೂರು ಜಿಲ್ಲೆ ಮತ್ತು ಕೋಲಾರ ಜಿಲ್ಲೆಗೆ ಹೇಮಾವತಿ ನದಿಯಿಂದ ನೀರನ್ನು ಕೊಡಬಹುದಾಗಿತ್ತು ಹಾರಂಗಿ ನೀವು ಏನು ಮಾಡಿದ್ದೀರಿ? ಅದಕ್ಕೂ ಅದೇ ಪರಿಸ್ಥಿತಿಯನ್ನು ಮಾಡಿದ್ದೀರಿ, ಇದರ ಪರಿಣಾಮವೇನಾಯಿತು, ನಮ್ಮ ಅಚ್ಚುಕಟ್ಟು ಪ್ರದೇಶ ವಿಸ್ತಾರವಾಗಲಿಲ್ಲ ಯಾವಾಗ ಇದು ವಿಸ್ತಾರವಾಗಲಿಲ್ಲವೋ ನಾವು ಲೆಕ್ಕವನ್ನು ಎಲ್ಲಿ ತೋರಿಸಬೇಕಾಗಿತ್ತು? ವಾಸ್ತವವಾಗಿ, ನಿಜವಾಗಿಯೂ ಕೂಡ ಇವತ್ತು ನಾವು 6 ಲಕ್ಷ ಎಕರೆ ಲೆಕ್ಕವನ್ನು ತೋರಿಸಿದರೆ ಅದರಲ್ಲಿಯೇ ಇರುತ್ತದೆ ಅಲ್ಲಿ ವಾಸ್ತವಾಗಿರುವಂತಹದ್ದು ಅಷ್ಟು ಅದರೂ ಮತ್ತೆ ಹೇಮಾವತಿ, ಕಬಿನಿ, ಹಾರಂಗಿ ಅಣೆಕಟ್ಟುಗಳನ್ನು ಕಟ್ಟುವಾಗ ನಾವು ಏನು ಮಾಹಿತಿಯನ್ನು

ಕೊಟ್ಟೆವು? Semi–dry crops ಎಂದು ಕೊಟ್ಟಿದ್ದೇವೆ Semi –dry crops ಎಂದು ಕೊಟ್ಟಾಗ ನೀರು ಹಂಚಿಕೆ pattern ಹೇಗೆ change ಆಗುತ್ತದೆ? Dry crop, semi dry crop ಮತ್ತೆ wet crop ಎಂದು ಕೊಟ್ಟಾಗ ನೀರು ಹಂಚಿಕೆಯ ಪ್ರಮಾಣದಲ್ಲಿ ವ್ಯತ್ಯಾಸಗಳು ಆಗುತ್ತದೆ ನಾವು semi dry crop ಎಂದು ಲೆಕ್ಕವನ್ನು ಕೊಟ್ಟಿದ್ದೇವೆ ಆದರೆ semi dry crop ಗೆ ಎಷ್ಟು ನೀರು ಬೇಕೆಂಬುದರ ಬಗ್ಗೆ ಅವರು ಲೆಕ್ಕವನ್ನು ಹಾಕಿಕೊಂಡಿದ್ದಾರೆ ನಮ್ಮ ತಲೆಯ ಮೇಲೆ ನಾವು ಕಲ್ಲನ್ನು ಹಾಕಿಕೊಂಡಿದ್ದೇವೆ ಅಂದರೆ ನಾವು ಯಾವ ಯಾವ ರೀತಿಯಾಗಿ ಕಲ್ಲನ್ನು ಹಾಕಿಕೊಂಡಿದ್ದೇವೆಂದರೆ, ನಾವು ಮೊದಲು ಪ್ಲಾನ್ ಮಾಡಿದ ರೀತಿಯಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದರೆ ಹೆಚ್ಚು ನೀರನ್ನು store ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇತ್ತು ನಾವು ಆ ಅವಕಾಶಗಳನ್ನು ಕಳೆದುಕೊಂಡು ಬಿಟ್ಟೆವು ನಾವು ಹೇಗೋ ಯಾರ permission ಇಲ್ಲದೇ ಕಟ್ಟಿಬಿಟ್ಟೆವು ಅಣೆಕಟ್ಟನ್ನು ಕಟ್ಟುವಾಗ ಸರಿಯಾದ ಪ್ಲಾನ್ ಮಾಡಿ ಕಟ್ಟಿದ್ದರೆ ಹೆಚ್ಚು ಅಚ್ಚುಕಟ್ಟು ಪ್ರದೇಶ ವಿಸ್ತಾರ ಆಗುತ್ತಿತ್ತು ಅದು ವಿಸ್ತಾರವಾಗಿದ್ದರೆ ಇವತ್ತು tribunalನಲ್ಲಿ ಆ ರೀತಿಯಾದ ತೀರ್ಪು ಬರುವುದಕ್ಕೆ ಸಾಧ್ಯವಿರಲಿಲ್ಲ ಆದರೆ ಅಂತರ್‌ರಾಷ್ಟ್ರೀಯ ಕಾನೂನು ಆ ರೀತಿಯಾಗಿ ಹೇಳುತ್ತದೆ ಆ ಕಾನೂನು ತಮಿಳುನಾಡಿನವರ ರಕ್ಷಣೆಗೆ ಬಂತು, ನಮ್ಮ ರಕ್ಷಣೆಗೆ ಇವತ್ತು ಬರಲಿಲ್ಲ ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು ಮೂರನೆಯ ಅಂಶವೇನೆಂದರೆ, ಇವತ್ತು ಏನು ಕಾವೇರಿ ಸಮಸ್ಯೆ ಇಷ್ಟು ಗಂಭೀರವಾಗಿ ಬಂದಿದೆ, ಇಷ್ಟು ಗಂಭೀರವಾದ ಸಮಸ್ಯೆಯಾದ ಮೇಲೆ ನಾವು ಕೂಡ ಅದರ ಬಗ್ಗೆ ಆಲೋಚನೆ ಮಾಡಬೇಕು ನಾವು ಕೂಡ ನಮ್ಮ ಸ್ವಯಂ ವಿಮರ್ಶೆಯನ್ನು ಮಾಡಿಕೊಳ್ಳಬೇಕಾಗುತ್ತದೆ 1924ನೇ ಇಸವಿಯಲ್ಲಿ ಆದಂಥ ಒಪ್ಪಂದ 1974ಕ್ಕೆ ಅವಧಿ ಮುಗಿಯಿತು 50 ವರ್ಷದ ಅವಧಿಯದು 1974ಕ್ಕೆ ಮುಗಿದ ಮೇಲೆ ಇಷ್ಟು ವರ್ಷಗಳ ಕಾಲ ನಾವು ಸಮಯವನ್ನು ವ್ಯರ್ಥ ಮಾಡಿದ್ದೇವೆಯೇ ಹೊರತು ಆ ನದಿ ನೀರಿನ ವಿವಾದವನ್ನು ಪರಿಹಾರ ಮಾಡಿಕೊಳ್ಳಲಿಕ್ಕೆ ಇದ್ದಂಥ ಎಲ್ಲಾ ಅವಕಾಶಗಳನ್ನು ನಾವು ಉಪಯೋಗಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ ಯಾವುದೇ ಅವಕಾಶಗಳನ್ನು ಉಪಯೋಗಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ ಇವತ್ತು records straight ಆಗಿ ಇರಬೇಕಾಗುತ್ತದೆ ಕೆಲವರು ಅಲ್ಲಿ ಏನು ಹೇಳುತ್ತಿದ್ದಾರೆ, ವಿ ಪಿ ಸಿಂಗ್ ನಮಗೆ ಅನ್ಯಾಯ ಮಾಡಿ, ಟ್ರಿಬ್ಯುನಲ್ ರಚನೆ ಮಾಡಿದರು ಎಂದು

ಹೇಳಿದರೆ ದಾಖಲೆಗಳು ಸರಿಯಾಗಿರಬೇಕು, ವಿ ಪಿ ಸಿಂಗ್ ಟ್ರಿಬ್ಯುನಲ್ ರಚನೆ ಮಾಡಿದ್ದಲ್ಲ ತಮಿಳುನಾಡಿನವರು ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕಿದ್ದರು ಮಾತುಕತೆಗಳ ಮುಖಾಂತರ, ಬೇರೆ ಇನ್ನಾವುದೇ ಮೂಲಕವಾಗಲಿ ಕಾವೇರಿ ನದಿ ನೀರಿನ ವಿವಾದ ಬಗೆಹರಿಯುತ್ತಿಲ್ಲ, ಈ ಸಮಸ್ಯೆಗೆ ಪರಿಹಾರ ಕೊಡಿ ಎಂದು ಕೇಳಿದಾಗ ಸುಪ್ರೀಂಕೋರ್ಟ್ ಟ್ರಿಬ್ಯುನಲ್ ರಚನೆ ಮಾಡಲಿಕ್ಕೆ ಡೈರೆಕ್ಷನ್ ಕೊಟ್ಟಿತು ಸುಪ್ರೀಂಕೋರ್ಟ್ ಡೈರೆಕ್ಷನ್ ಕೊಟ್ಟಾಗ ವಿ ಪಿ ಸಿಂಗ್‌ರವರ ಜಾಗದಲ್ಲಿ ಬೇರೆ ಯಾರೇ ಇದ್ದರೂ ಕೂಡ ಏನು ಮಾಡುತ್ತಿದ್ದರು? ಟ್ರಿಬ್ಯುನಲ್ ರಚನೆ ಮಾಡಲೇಬೇಕಾಯಿತು ಆ ರೀತಿ ಟ್ರಿಬ್ಯುನಲ್ ರಚನೆ ಮಾಡಿದಾಗ ನಾವು ಟ್ರಿಬ್ಯುನಲ್ ರಚನೆಯಾದ 16 ವರ್ಷಗಳಿಂದ ನಾವು ಯಾವ ರೀತಿಯಾಗಿ ದಾಖಲೆಗಳನ್ನು ಒದಗಿಸಿದ್ದೇವೆ? ಯಾವ್ಯಾವ ದಾಖಲೆಗಳನ್ನು ಒದಗಿಸಿದ್ದೇವೆ? ವಾದ ಹೇಗೆ ಮಾಡಿದ್ದೇವೆ? ನಮ್ಮ ವಾಸ್ತವ ಪರಿಸ್ಥಿತಿಯನ್ನು ಏನು ಹೇಳಿದ್ದೇವೆ? ಇವೆಲ್ಲವುಗಳ ಬಗ್ಗೆ ನಾನು ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ, ಆದರೆ ನಮ್ಮ ಲಾಯರ್‌ಗಳು ಏನು ವಾದ ಮಾಡಿದ್ದಾರೆ, really they did a marvelous job ನಮ್ಮ ಲಾಯರ್‌ಗಳು ಸರಿಯಾಗಿ ವಾದ ಮಾಡಿಲ್ಲವೆಂದು ಯಾರೂ ಸಹ ಅನುಮಾನ ವ್ಯಕ್ತಪಡಿಸುವಂಥ ಅವಶ್ಯಕತೆಯಿಲ್ಲ ಇಡೀ ಜಡ್ಜ್‌ಮೆಂಟ್ ಅನ್ನು ನಾನು ಓದಿದ್ದೇನೆ ಅದರಲ್ಲಿ ಕೆಲವು synopsis ಅಷ್ಟನ್ನೇ ಮಾಡಿದ್ದೇನೆ ಪೂರ್ಣವಾದ ಜಡ್ಜಮೆಂಟ್ ತಂದಿಲ್ಲ ಅದಕ್ಕಿಂತ ಒಳ್ಳೆಯ ವಾದವನ್ನು ಟ್ರಿಬ್ಯುನಲ್ ಮುಂದೆ ಯಾರೂ ಮಂಡಿಸಲಿಕ್ಕೆ ಸಾಧ್ಯವಿಲ್ಲ ತೀರ್ಪು ಅವರು ಕೊಟ್ಟಿದ್ದಾರೆ ಅದು ಬೇರೆ ವಿಚಾರ, ಅವರು ಯಾವ ಕಾರಣಕ್ಕೆ ಆ ರೀತಿ ತೀರ್ಪು ಕೊಟ್ಟಿದ್ದಾರೆ ಅದು ಬೇರೆ ವಿಚಾರ ಆದರೆ ನಮ್ಮ ಲಾಯರುಗಳ ಟೀಮ್ ಏನಿದೆ ನಮ್ಮ ಕರ್ನಾಟಕವನ್ನು ಪ್ರತಿನಿಧಿಸಿದಂಥ ಟೀಮ್ they did an excellent job ಅದಕ್ಕಿಂತ ಒಳ್ಳೆಯ ಕೆಲಸವನ್ನು ಯಾವ ಲಾಯರ್ ಮಾಡಲಿಕ್ಕೆ ಸಾಧ್ಯವಿಲ್ಲ In spite of it we lost the case, because of the ground realities What are the ground realities? ಅದರ ಬಗ್ಗೆ ಈಗ ನಾನು ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ ಎರಡನೆಯದು ಈಗಲೂ ಕೂಡ ನಮಗೆ ಟ್ರಿಬ್ಯುನಲ್‌ನಲ್ಲಿ ಕರ್ನಾಟಕಕ್ಕೆ ಏನು ನ್ಯಾಯವಾಗಿ ಸಿಗಬೇಕಾಗಿತ್ತು ಅದು ಸಿಕ್ಕಿಲ್ಲವೆಂದು ನಮ್ಮೆಲ್ಲರ ಭಾವನೆ ಇದೆ ನಿಜ ಅದು, ಅದರಲ್ಲಿ ಏನು ತಪ್ಪಿಲ್ಲ ಟ್ರಿಬ್ಯುನಲ್‌ನವರು ಮನಸ್ಸು ಮಾಡಿದ್ದರೆ, ಅವರು

ಕಾನೂನಿನ ಪ್ರಕಾರ ಹೋಗಿಬಿಟ್ಟಿದ್ದಾರೆ ಅವರೇನಾದರೂ liberal view ತೆಗೆದುಕೊಂಡಿದ್ದಿದ್ದರೆ ನಮಗೆ ಸಹಾಯ ಮಾಡಬಹುದಾಗಿತ್ತು ಮಾಡಲಿಕ್ಕೆ ಸಾಧ್ಯತೆ ಇತ್ತು, ಆದರೆ ಹಾಗೆ ಮಾಡಲಿಲ್ಲ ಏಕೆ ಮಾಡಲಿಲ್ಲವೆಂದರೆ ದಿನ ಬೆಳಗಾದರೆ ನಾವು ಅವರ ವಿರುದ್ಧ ಧಿಕ್ಕಾರ ಮಾಡುತ್ತಿದ್ದೆವು ಈಗ ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿಸುತ್ತೇನೆ, ಟ್ರಿಬ್ಯುನಲ್ ತೀರ್ಮಾನ ನಮಗೆ ಬೇಡ, ಧಿಕ್ಕಾರ ಮಾಡೋಣ ಸುಪ್ರೀಂ ಕೋರ್ಟ್ ತೀರ್ಮಾನವನ್ನು ಧಿಕ್ಕಾರ ಮಾಡೋಣ, ಇನ್ನೆಲ್ಲಿ? ಯಾವುದಾದರೂ ಒಂದು ಅಧಾರಿಟಿ ಬೇಕಲ್ಲವೇ, ಇದನ್ನು ತೀರ್ಮಾನ ಮಾಡಲಿಕ್ಕೆ ಸುಪ್ರೀಂಕೋರ್ಟ್ ಟ್ರಿಬ್ಯುನಲ್ ಮಾಡಬೇಕೆಂದು ಡೈರೆಕ್ಷನ್ ಕೊಟ್ಟ ನಂತರವೂ ಬೆಳಿಗ್ಗೆ ನಮ್ಮ ಮಾನ್ಯ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ನಮ್ಮ ಹೆಗ್ಡೆಯವರು ಅದಕ್ಕೆ ದಾಖಲೆ ಬೇಕು ಎಂದು ಕೇಳಿದರು ಕರೆದು ಮಾತನಾಡಬಹುದಿತ್ತು, ಕರೆದು ಮಾತನಾಡಿದರು, ಮಾತುಕತೆಗೆ ಒಪ್ಪಲಿಲ್ಲ, ಆದ್ದರಿಂದ ಅವರು ಟ್ರಿಬ್ಯುನಲ್ ಅನ್ನು ನೇಮಕ ಮಾಡುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಯಿತು ಅಂದಿನ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಕರೆದರು, ಅಂದಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳನ್ನು ಮಾತುಕತೆಗೆ ಕರೆದರು, ಮಾತನಾಡಿದರು, ಆದರೆ ಅದರಿಂದ ಏನು ಪ್ರಯೋಜನವಾಗುವುದಿಲ್ಲವೆಂಬ ಪರಿಸ್ಥಿತಿ ನಿರ್ಮಾಣವಾದಾಗಷ್ಟೇ ಅವರು ಟ್ರಿಬ್ಯುನಲ್ ಅನ್ನು ರಚನೆ ಮಾಡುವಂಥ ಅನಿವಾರ್ಯ ಪರಿಸ್ಥಿತಿ ಬಂತು ಸರಿ, ನಾವು ಇವತ್ತು ಒಕ್ಕೂಟದ ವ್ಯವಸ್ಥೆಯಲ್ಲಿದ್ದೇವೆ ನಾವು ಒಂದು ನ್ಯಾಯಾಂಗವನ್ನು ಒಪ್ಪಿದ್ದೇವೆ ನಾವು ಯಾವುದಾದರೂ ಒಂದು ನ್ಯಾಯಾಂಗದ ತೀರ್ಪನ್ನು ಒಪ್ಪಬೇಕಲ್ಲವೇ? ನಾವಾಗಬಹುದು, ತಮಿಳುನಾಡಿನವರಾಗಬಹುದು, ಮತ್ತೊಂದು ರಾಜ್ಯದವರಾಗಬಹುದು Why we are having the Supreme Court? We are all bound by it. ಆ ಸುಪ್ರೀಂಕೋರ್ಟ್‌ನ ಆದೇಶದ ಮೇಲೆ ಟ್ರಿಬ್ಯುನಲ್ ರಚನೆ ಮಾಡಿತು ಯಾವುದಾದರೂ ಒಂದು ಅಧಾರಿಟಿ, some authority must be there, to decide when we fail to settle our issues through the dialogue Which is that authority? Which authority we are going to accept? ನಾವಾಗಬಹುದು, ತಮಿಳುನಾಡಿನವರಾಗಬಹುದು ಬೇರೆ ಯಾವುದೇ ರಾಜ್ಯದವರಾಗಬಹುದು, ಏನಾದರೂ ಒಂದು ಅಧಾರಿಟಿ ಇರಬೇಕಲ್ಲವೇ

ತೀರ್ಮಾನ ಮಾಡಲಿಕ್ಕೆ Then only this federal system will be saved. Otherwise how? ಆಗ ನಾವು ಏನು ಮಾಡಬೇಕು? ಸುಪ್ರಿಂಕೋರ್ಟ್ ತೀರ್ಮಾನ ಬೇಡ, ಟ್ರಿಬ್ಯುನಲ್ ತೀರ್ಮಾನ ಬೇಡ, ಅದನ್ನು ತಿರಸ್ಕಾರ ಮಾಡಿ, ರಾಜ್ಯದ ಹಿತದೃಷ್ಟಿಯಿಂದ ಈ ತೀರ್ಪನ್ನು ತಿರಸ್ಕಾರ ಮಾಡೋಣವೆಂದು, ನಾವು ತೀರ್ಮಾನಿಸೋಣ Then what? what next? ಅವರ ಅಪೀಲ್ ಬೇಡವೆನ್ನುತ್ತೇವೆ ಅವರದ್ದು ತೀರ್ಮಾನ ಆಗುವುದಿಲ್ಲವೆನ್ನುತ್ತೇವೆ ಸುಪ್ರೀಂಕೋರ್ಟ್ ತೀರ್ಮಾನವನ್ನು ನಾವು ವಿರೋಧ ಮಾಡಲಿಲ್ಲವೇ? ವಿರೋಧಿಸಿದ್ದೇವೆ ಇದರ ಪರಿಣಾಮಗಳೇನಾಗುತ್ತದೆಂಬುದನ್ನು ಆಲೋಚನೆ ಮಾಡಬೇಕು ಈ ಎಲ್ಲಾ ಹಿನ್ನೆಲೆಯಲ್ಲಿ ಅವರು ಟ್ರಿಬ್ಯುನಲ್‌ನಲ್ಲಿ ನಮಗೆ ಸಹಾಯ ಮಾಡಬಹುದಾಗಿತ್ತು ಅವರು ಸಹಾಯ ಮಾಡಿದ್ದರೆ ನಮಗೆ ಇಷ್ಟು ಅನ್ಯಾಯವಾಗುತ್ತಿರಲಿಲ್ಲ ಎಲ್ಲಿ ಅವರು ಸಹಾಯ ಮಾಡಬಹುದಾಗಿತ್ತು ಎಂಬುದನ್ನು ನಾಲ್ಕು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಒಂದನೆಯದು, ಕೇರಳದ ಭಾಗವಾಗಿರುವ 30 ಟಿ ಎಂ ಸಿ ನೀರೇನಿದೆ, ಅದರಲ್ಲಿ ಅವರು ಈಗ ಕೇವಲ 9 ಟಿ ಎಂ ಸಿ ನೀರನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದಾರೆ 21 ಟಿ ಎಂ ಸಿ ನೀರು ಅವರು ಉಪಯೋಗ ಮಾಡುತ್ತಿಲ್ಲ ಹಾಗೆ ಉಪಯೋಗವಾಗದ ನೀರು ಸ್ಟೋರ್ ಆಗುವುದು ಎಲ್ಲಿ? ಕಬಿನಿಯಲ್ಲಿ ಕಬಿನಿಯಲ್ಲಿ ಸ್ಟೋರ್ ಆಗತಕ್ಕಂಥ ನೀರನ್ನು ಸರಾಸರಿಯಾಗಿ ತಮಿಳುನಾಡಿಗೆ ಕೊಟ್ಟುಬಿಡಿ ಎಂದು ಹೇಳುವುದು ಸರಿಯಲ್ಲ ಅವರು ಏನು ಹೇಳಿದ್ದಾರೆ, ಕೇರಳದವರು ನೀರು ಉಪಯೋಗಿಸುವವರೆಗೂ ತಮಿಳುನಾಡಿನವರು ಉಪಯೋಗಿಸಬಹುದೆಂದು ಹೇಳಿದ್ದಾರೆ ಅದೇ ಮಾತನ್ನು ನಮಗೆ ಹೇಳಬಹುದಾಗಿತ್ತಲ್ಲವೇ? ಏತಕ್ಕೆ ಹೇಳಬಾರದಾಗಿತ್ತು? ಏತಕ್ಕೆ ಅವರು ಹೇಳಲಿಲ್ಲ? ಅವರು ಇಲ್ಲಿ ನಮಗೆ ಸಹಾಯ ಮಾಡಬಹುದಿತ್ತು ಅಲ್ಲಿಯೂ ಸಹಾಯ ಮಾಡಲಿಲ್ಲ, ಏಕೆ ಮಾಡಲಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ, ಮತ್ತೆ ನಾನು ಹೇಳಲಿಕ್ಕೆ ಹೋಗುವುದಿಲ್ಲ ಸಹಾಯ ಮಾಡಬಹುದಾಗಿತ್ತು ಮಾಡಲಿಲ್ಲ, 14 ಟಿ ಎಂ ಸಿ 10+4 Environmental protection ಬಗ್ಗೆ ಏನು ಅವರು ಹೇಳಿದ್ದಾರೆ Evaporation loss + Environmental protection, escapes, ಅದರಲ್ಲಿ ನಮಗೆ ಕೊಡಬಹುದಾಗಿತ್ತು, ಅದನ್ನು ನಮಗೆ ಕೊಡಲಿಕ್ಕಾಗಲಿಲ್ಲ ನಮ್ಮ

ನೀರನ್ನೇ ಅವರಿಗೆ ಕೊಡಿ ಎಂದು ಹೇಳಿದ್ದಾರೆ ಮತ್ತೆ ನೀವು ಮಧ್ಯಂತರ ತೀರ್ಪಿನಲ್ಲಿ ಏನು ಹೇಳಿದ್ದೀರಿ, 205 ಟಿ ಎಂ ಸಿ ನೀರನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದೀರಿ ಅಂದು ಯಾವ ರೀತಿಯಲ್ಲಿ ಲೆಕ್ಕ ಹಾಕಿದಿರಿ ನೀವು? ಮೆಟ್ಟೂರು ಡ್ಯಾಂನಿಂದ ನೀವು 192 ಟಿ ಎಂ ಸಿ ನೀರು ಕೊಟ್ಟರೆ, 205 ಟಿ ಎಂ ಸಿ ನೀರು ಕೊಡುತ್ತದೆ, ಮೆಟ್ಟೂರು ಮತ್ತು ಬಿಳಿಗುಂಡ್ಲೂ ಮಧ್ಯೆ 70 ಕಿ ಮೀ ನಲ್ಲಿ ನಮಗೆ ಅಥವಾ 70 ಕಿ ಮೀ ನಲ್ಲಿ 25 ಟಿ ಎಂ ಸಿ ನೀರು ಇದೆ 25 ಟಿ ಎಂ ಸಿ ನೀರು ಸಹ ತಮಿಳುನಾಡಿನವರಿಗೆ ಹೋಗುತ್ತಿದೆ 192 ಟಿ ಎಂ ಸಿ ನೀರನ್ನು ಬಿಳಿಗುಂಡ್ಲುವಿನಿಂದ ಕೊಡಿ ಎನ್ನುವುದರ ಬದಲಿಗೆ, 180 ಟಿ ಎಂ ಸಿ ನೀರನ್ನು ಮೆಟ್ಟೂರಿನಿಂದ ಕೊಡಿ ಎಂದು ಹೇಳಿದರೆ 182 + 25, ನಮಗೆ 12 ಟಿ ಎಂ ಸಿ ನೀರು save ಆಗುತ್ತಿತ್ತು We would have saved that 12 T M C That could have been done by the Tribunal. ಅಲ್ಲಿಯೂ ಅವರು ನಮಗೆ ಸಹಾಯ ಮಾಡಲಿಕ್ಕೆ ಹೋಗಲಿಲ್ಲ ಮತ್ತೆ more strangely, ground water ಅನ್ನು ಲೆಕ್ಕ ಹಾಕಲಿಲ್ಲ Ground water availability ಏನಿದೆ ಆ ground water ಅನ್ನು ಲೆಕ್ಕ ಹಾಕಲಿಲ್ಲ ಇದಕ್ಕೆ ತಮಿಳುನಾಡಿನವರೇ ಒಪ್ಪಿದ್ದಾರೆ ಟ್ರಿಬ್ಯುನಲ್ ಮುಂದೆ ವಾದ ಮಾಡತಕ್ಕಂಥ ಸಂದರ್ಭದಲ್ಲಿ ತಮಿಳುನಾಡಿನವರೇ ಒಪ್ಪಿರತಕ್ಕಂಥ ವಿಚಾರವೇನೆಂದರೆ ನಾವು ಈಗ ಸಧ್ಯಕ್ಕೆ 47 ಟಿ ಎಂ ಸಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆಂದು ಅವರೇ ಅಫಿಡವಿಟ್ ಹಾಕಿದ್ದಾರೆ, ವಾದ ಮಾಡಿದ್ದಾರೆ ತಮಿಳುನಾಡಿನವರೇ 47 ಟಿ ಎಂ ಸಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆಂದು ಹೇಳಿದಾಗ ನೀವು ಅದನ್ನು ಪರಿಗಣನೆ ಮಾಡಲಿಲ್ಲವೆಂದರೆ ಏನಿದರ ಅರ್ಥ? ತಮಿಳುನಾಡಿನವರು ಒಪ್ಪಿದ್ದಾರೆ You have not agreed. Tribunal has not agreed. That is where you could have helped Karnataka. ಅಲ್ಲಿಯೂ ಕರ್ನಾಟಕಕ್ಕೆ ನೀವು ಸಹಾಯ ಮಾಡಬಹುದಾಗಿತ್ತು

ಶ್ರೀ ಸಿದ್ದರಾಮಯ್ಯ – ನ್ಯಾಯ ಕೊಡಬೇಕಾಗಿತ್ತು, ಸಹಾಯ ಎಂದು ಹೇಳುವುದು ಬೇಡ We are not asking help from the Tribunal We are asking justice

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಹೌದು, ನ್ಯಾಯ ಒದಗಿಸಬೇಕಾಗಿತ್ತು, ಸಹಾಯ ಎಂದು ಹೇಳುವುದು ಬೇಡ ನ್ಯಾಯ ಒದಗಿಸಬಹುದಾಗಿತ್ತು,

ಅದನ್ನು ಒದಗಿಸಲಿಲ್ಲ ನೀವು ಮತ್ತೆ crop pattern ಬಗ್ಗೆ ನೀವು ಹೇಳುವಂಥ ಸಂದರ್ಭದಲ್ಲಿ ನಮಗೆ ಮಾತ್ರ stringent ಆಗಿ ಇರಿ ಎಂದು ಹೇಳುತ್ತೀರಿ ಭಾರಿ strict ಆಗಿ ನೀವು ಫಾಲೋ ಮಾಡಬೇಕೆಂದು ನಮಗೆ ಹೇಳುತ್ತೀರಿ ಅದೇ ಮಾತನ್ನು ಅವರಿಗೇಕೆ ಹೇಳಬಾರದು? ಹಾಗಾಗಿ ಈ ನಾಲ್ಕೈದು ವಿಚಾರಗಳಲ್ಲಿ ಬೆಂಗಳೂರಿಗೆ ಕುಡಿಯುವ ನೀರಿನ ಪ್ರಶ್ನೆ ಟ್ರಿಬ್ಯುನಲ್‌ನವರು ಬೆಂಗಳೂರಿನ ಕುಡಿಯುವ ನೀರಿನ ಬಗ್ಗೆ ತೆಗೆದುಕೊಂಡಿರುವ view ಏನು? ಕಾವೇರಿ ಬೇಸಿನ್‌ಗೆ ಸೇರತಕ್ಕಂಥ ಪ್ರದೇಶ ಕಾವೇರಿ ಬೇಸಿನ್‌ಗೆ ಬೆಂಗಳೂರಿನ ಯಾವ್ಯಾವ ಪ್ರದೇಶ ಸೇರುತ್ತದೆ ನಾವೆಲ್ಲಾ ಅಂದುಕೊಂಡಿದ್ದುದು ಇಡೀ ಬೆಂಗಳೂರು ನಗರ ಕಾವೇರಿ ಬೇಸಿನ್‌ಗೆ ಸೇರುತ್ತದೆಂದು ಇಲ್ಲಾ, ಇಡೀ ಬೆಂಗಳೂರು ನಗರ ಕಾವೇರಿ ಬೇಸಿನ್‌ಗೆ ಸೇರುವುದಿಲ್ಲ 1/3 ಏರಿಯಾದಲ್ಲಿ ಇರತಕ್ಕಂಥ population ಅನ್ನು ಈಗಿರತಕ್ಕಂಥ populationಗೆ ಲೆಕ್ಕ ಹಾಕಿ 2011ನೇ ಇಸವಿಗೆ ಈ percentageನಲ್ಲಿ ಎಷ್ಟು population ಬೆಳೆಯಬಹುದು ಎನ್ನತಕ್ಕಂಥ ಅಂದಾಜಿನಲ್ಲಿ ಅವರು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ ಹಾಗಾಗಿ ನಮಗೆ ಸಮಸ್ಯೆಯಾಗಿರತಕ್ಕಂಥಾದ್ದು ಮತ್ತು ಕೈಗಾರಿಕಾ ಉಪಯೋಗಕ್ಕೋಸ್ಕರ ನೀರು ಬೇಕು ಎನ್ನುವುದನ್ನು ನೀವು ಅಂದಾಜು ಮಾಡುವಂತಹ ಸಂದರ್ಭದಲ್ಲಿ, ಟ್ರಿಬ್ಯುನಲ್‌ನವರು ನೀವು ಯಾವುದನ್ನು ಪರಿಗಣನೆ ಮಾಡಬೇಕಾಗಿತ್ತು? What is the growth rate of industry in Bangalore? You should consider it ಅದನ್ನು ಪರಿಗಣನೆಗೆ ತೆಗೆದುಕೊಳ್ಳಲೇ ಬೇಕಾಗುತ್ತದೆ ನೀವು ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ, ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಬಗ್ಗೆ scientific ಆದಂತಹ realistic ಆದಂತಹ approach ಅನ್ನು ತೆಗೆದುಕೊಳ್ಳಲಿಕ್ಕಾಗಲಿಲ್ಲ ಈ ಕಾರಣಗಳಿಂದ ಇವತ್ತು ಆ ರೀತಿಯಾದಂಥ ತೀರ್ಪು ಬರಲಿಕ್ಕೆ ಸಾಧ್ಯವಾಗಿದೆ ಆ ರೀತಿಯಾದಂಥ ತೀರ್ಪು ಇವತ್ತು ನಮ್ಮ ಕರ್ನಾಟಕಕ್ಕೆ ನ್ಯಾಯ ಒದಗಿಸಿಲ್ಲ ಬೇರೆ ದಾರಿಯೇನು? ಈಗ ಅದಕ್ಕೆ ದಾರಿಯೇನು ಎಂದು ಹುಡುಕಬೇಕಲ್ಲವೇ? ಹೋಗಲಿ, ನಾವೆಲ್ಲಾ ಒಂದು ನಿರ್ಣಯ ಮಾಡೋಣ, ಅಸೆಂಬ್ಲಿ ರದ್ದು ಮಾಡೋಣ ಆಗ ನಮ್ಮ ಸಮಸ್ಯೆ ಪರಿಹಾರವಾಗುತ್ತದೆಯೇ? ಸರ್ಕಾರವನ್ನು ಉರುಳಿಸೋಣ, ನೀವು ಸರಿಯಿಲ್ಲ, ನಿಮ್ಮಿಂದಾಗಿಯೇ ಅನ್ಯಾಯವಾಗಿಬಿಟ್ಟಿದೆ, ಈ ರೀತಿ ತಾನೇ ನಾವು ವಾದ ಮಾಡುವುದು? ನಿಮ್ಮ ಸರ್ಕಾರವನ್ನು ಉರುಳಿಸಿಬಿಡೋಣ ಈಶ್ವರಪ್ಪನವರೇ

ನೀರು ಬಂದುಬಿಡುತ್ತದೆಯೇ? ಸರ್ಕಾರಗಳು ಬೇಜವಾಬ್ದಾರಿತನ, ಬೇಜವಾಬ್ದಾರಿತನ ಎಂದು ಎಲ್ಲರೂ ಅವರು ಹೇಳಿದ್ದಾರೆ, ಇವರು ಹೇಳುತ್ತಿದ್ದಾರೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಎಲ್ಲರೂ Co–operation ಕೊಡುತ್ತೇವೆಂದು ಹೇಳಿದ್ದು ಬಿಟ್ಟರೆ, ನೀವು ಮಾಡಿಲ್ಲವೆಂದು ಯಾವ ಸರ್ಕಾರದ ಮೇಲೆ ಯಾರೂ ಈ ಸಲ ದೂಷಣೆಯನ್ನು ಮಾಡಿಲ್ಲ Loyal concern ಅಷ್ಟೇ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಹಾಗಾಗಿ ನಾವು ಇವತ್ತು ಇದಕ್ಕೆ ಪರಿಹಾರ ಮಾರ್ಗವೇನು ಎನ್ನತಕ್ಕಂಥದ್ದನ್ನು ಆಲೋಚನೆ ಮಾಡಬೇಕಾಗುತ್ತದೆ ಪರಿಹಾರ ಮಾರ್ಗ ಯಾವುದು ಸರಿಯಿದೆ, ಅದನ್ನು ಹುಡುಕಬೇಕಾಗುತ್ತದೆ ಹೊರತು ಅದನ್ನು ಬಿಟ್ಟು ಬೇರೆ ಮಾರ್ಗಗಳಿಂದ ನಾವು ಈ ಸಮಸ್ಯೆಗೆ ಪರಿಹಾರ ಹುಡುಕಲಿಕ್ಕೆ ಸಾಧ್ಯವಿಲ್ಲ ಬಂದ್‌ಗಳಿಂದ, ಸ್ಟ್ರೈಕ್‌ಗಳಿಂದ ಈ ಸಮಸ್ಯೆ ಪರಿಹಾರವಾಗುತ್ತದೆಂದು ನಾವು ಏನಾದರೂ ಭಾವಿಸಿದ್ದರೆ ಖಂಡಿತ ಅದು ಸಾಧ್ಯವಿಲ್ಲ ಕಾನೂನು ಮೂಲಕವೇ ನಮಗೆ ಸಾಧ್ಯವಿರುವುದು, ಅದು ಬಿಟ್ಟರೆ ಇನ್ನೊಂದು ಮಾರ್ಗವಿದೆ It is a political solution. ಏನು political solution? ನಮಗೇನಾದರೂ ಶಕ್ತಿಯಿದ್ದರೆ ಕೇಂದ್ರ ಸರ್ಕಾರದ ಮೇಲೆ ಸಿಂಧ್ಯಾರವರು ಕಾಂಗ್ರೆಸ್ ಸ್ನೇಹಿತರಿಗೆ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟರು ನಿಜವಾಗಿಯೂ it is a good suggestion. ಏನದು? ನಿಮ್ಮ ಹಿತಾಸಕ್ತಿಯ ಕಾರಣಕ್ಕೋಸ್ಕರವಾದರೂ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ತಮಿಳುನಾಡನ್ನು ಮಾತುಕತೆಗೆ ಕರೆಯತಕ್ಕಂಥ ರೀತಿಯಲ್ಲಿ ಪರಿಸ್ಥಿತಿ ನಿರ್ಮಾಣ ಮಾಡಿ, ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶ ಮಾಡಿ, ಏನಾದರೂ ಮಾಡಿ through dialogue, ಮಾತುಕತೆ ಮೂಲಕ ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡಿ ಇದೂ ಕೂಡ ಒಂದು ದಾರಿ ಇದೆ There are only two ways ಒಂದು legal, ಕಾನೂನು ಪ್ರಕಾರ ಸಾಧ್ಯವಿದ್ದರೆ, ಆದರೆ ನನಗೆ ಗೊತ್ತಿರತಕ್ಕಂಥ ಸಣ್ಣ ಪ್ರಮಾಣದ ಕಾನೂನಿನಿಂದ ಹೆಚ್ಚು ಬದಲಾವಣೆ ಮಾಡಲಿಕ್ಕೆ ಸಾಧ್ಯವಿದೆಯೆಂದು ನಾನೇನು ನಿರೀಕ್ಷೆ ಮಾಡುತ್ತಿಲ್ಲ ನನ್ನ ತಿಳುವಳಿಕೆಗೊಳಪಟ್ಟು ನಾನು ನಿರೀಕ್ಷೆ ಮಾಡಲಿಕ್ಕಾಗುವುದಿಲ್ಲ ಇನ್ನು ಎರಡನೆಯ ದಾರಿ, ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಸರ್ಕಾರ ಮಧ್ಯೆ

ಪವೇಶ ಮಾಡಿ ನಮಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡಬಹುದು ಈ ಎರಡೂ ಪ್ರಯತ್ನಗಳನ್ನು ನಮ್ಮ ಸರ್ಕಾರ, ನಾವೆಲ್ಲರೂ ಸೇರಿ ಮಾಡಬೇಕು ಅಂದರೆ ಬರೀ ಸರ್ಕಾರವೇ ಅಲ್ಲ ಇಡೀ ಎಲ್ಲಾ ರಾಜಕೀಯ ಪಕ್ಷಗಳು ಒಟ್ಟಾಗಿ ಪ್ರಯತ್ನ ಮಾಡಬೇಕು

ಶ್ರೀ ಜೆ ಸಿ ಮಾಧುಸ್ವಾಮಿ – ನೀವು ಕಮ್ಯುನಿಸ್ಟರವರು ಮನಸ್ಸು ಮಾಡಿದರೆ ಏನಾದರೂ ಸಾಧ್ಯವಾಗುತ್ತದೆ ಇವರೇನಾದರೂ ನಮ್ಮ ಪರವಾಗಿ ನಿಂತುಕೊಂಡು ಬಿಟ್ಟರೆ, ಆ ಸರ್ಕಾರವೇ ಹೊರಟು ಹೋಗಿಬಿಡುತ್ತದೆ ಏನಾದರೂ ಮಾಡಿ ಶ್ರೀರಾಮರೆಡ್ಡಿಯವರು ಈಗ ಆ ಪಕ್ಷವನ್ನು ಬಳಸಿಕೊಳ್ಳಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಈಗ ಸರ್ಕಾರ ಹೊರಟು ಹೋಗಿ ಬಿಡುತ್ತದೆಂದು ನೀವು ಹೇಳಿದರೆ, ಈಗಿನ ಪರಿಸ್ಥಿತಿಯಲ್ಲಿ ಸರ್ಕಾರವನ್ನು ಉರುಳಿಸಲಿಕ್ಕೆ ಸಧ್ಯಕ್ಕೆ ನಾವು ತಯಾರಿಲ್ಲ ಏಕೆಂದರೆ ಈಗಿನ ಪರಿಸ್ಥಿತಿಯಲ್ಲಿ ಆ ಸರ್ಕಾರವನ್ನು ಉರುಳಿಸಿದರೆ ಇನ್ಯಾರು ಬರಬೇಕು ಎನ್ನುವ ಪ್ರಶ್ನೆ ನಮ್ಮ ಮುಂದೆ ಕಾಡುತ್ತದೆ ಪಾಪ, ಈಶ್ವರಪ್ಪನವರನ್ನು ನಾವು ಏಕೆ ದೂಷಿಸಬೇಕು ಈಗಾಗಲೇ ಪರಿಸ್ಥಿತಿ ತೀರ ಗಂಭೀರವಾಗಿದೆ ನಾವೆಲ್ಲರೂ ಸೇರಿ, ಅವರು, ಇವರು ಎಂದು ಅಲ್ಲ, ನಾವೆಲ್ಲರೂ ಸೇರಿ ವಾಜಪೇಯಿ, ಅದ್ವಾನಿಯವರು, ಎಡಪಕ್ಷಗಳು, ಕಾಂಗ್ರೆಸ್ ಇದರಲ್ಲಿ ಎಲ್ಲರೂ ಒಟ್ಟಾಗಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಮಾತುಕತೆ ಮುಖಾಂತರ ರಾಜಕೀಯ ಪರಿಹಾರವನ್ನೇನಾದರೂ ಮಾಡಲಿಕ್ಕೆ ಪ್ರಯತ್ನವನ್ನು ಮಾಡಬೇಕು ಈ ಎರಡೇ ದಾರಿಗಳಿರತಕ್ಕಂಥಾದ್ದು ಈ ಎರಡು ದಾರಿಗಳನ್ನು ಬಿಟ್ಟು ಯಾವುದರಿಂದಲೂ ನಮ್ಮ ಸಮಸ್ಯೆ ಪರಿಹಾರ ಆಗಲಿಕ್ಕೆ ಸಾಧ್ಯವಿಲ್ಲ ಕಡೆಯದಾಗಿ, ನಾನು ಹೇಳುವುದೇನೆಂದರೆ, ನಮ್ಮದು federal structure ನಾನು ಪ್ರಾರಂಭದಲ್ಲೇ ಹೇಳಿದೆ, we are living in a federal structure We should not damage that structure Our first commitment is to our nation and our federal system, ಹಾಗಾಗಿ federal systemಗೆ ಧಕ್ಕೆ ತರದ ರೀತಿಯಲ್ಲಿ ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲಿಕ್ಕೆ ಯಾವ್ಯಾವ ಮಾರ್ಗಗಳಿವೆ, ಅವನ್ನೆಲ್ಲಾ ಹುಡುಕಿ ಈ ಎರಡೂ ಮಾರ್ಗಗಳಲ್ಲಿ ಯಾವುದಾದರೂ ಒಂದು ಮಾರ್ಗದ ಮೂಲಕ ನಾವು ನಮಗೆ ನ್ಯಾಯವನ್ನು

ಒದಗಿಸಿಕೊಳ್ಳಬೇಕೆಂಬ ಪ್ರಯತ್ನವನ್ನು ಮಾಡಬೇಕೆಂದು ತಮ್ಮ ಮುಖಾಂತರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು – ಆರಗ ಜ್ಞಾನೇಂದ್ರರವರು ಮಾತನಾಡಿ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) – ಮಾನ್ಯ ಅಧ್ಯಕ್ಷರೇ, ಕಾವೇರಿ ನ್ಯಾಯಾಧೀಕರಣದ ತೀರ್ಪಿನ ನಂತರ ಶಾಸನಸಭೆಯಲ್ಲಿ ಪ್ರಸ್ತಾಪವಾಗಿರತಕ್ಕಂಥ ವಿಚಾರದ ಬಗ್ಗೆ ನನಗೂ ಕೂಡ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿರತಕ್ಕಂಥ ತಮಗೆ ವಂದಿಸುತ್ತಾ, ನಾನು ವಿಶೇಷವಾಗಿ ಕೃಷ್ಣಾ ಬೇಸಿನ್‌ನಿಂದ ಬಂದಿರತಕ್ಕಂಥವನು ಫೆಬ್ರವರಿ 5ನೇ ತಾರೀಖು ಬಂದಂಥ ಈ ತೀರ್ಪಿನಿಂದ ಈ ರಾಜ್ಯದ ಜನ ಒಗ್ಗಟ್ಟಾಗಿ ನೆಲ, ಜಲದ ಪ್ರಶ್ನೆ ಬಂದಾಗ ನಮ್ಮ ರಾಜಕೀಯವನ್ನು, ಮತ್ತು ಬೇರೆ ಬೇರೆ ವಿಷಯಗಳನ್ನು ಮರೆತು ಒಂದಾಗಿ ನಿಲ್ಲುತ್ತೇವೆನ್ನುವುದಕ್ಕೆ ಈ ಒಂದು ಶಾಸನಸಭೆಯಲ್ಲಿ ನಡೆಯುತ್ತಿರುವ ಈ ಚರ್ಚೆಯಾಗಲಿ, ತೀರ್ಪಿನ ನಂತರ ಈ ರಾಜ್ಯದ ವ್ಯಾಪ್ತಿಯಲ್ಲಿ ನಡೆದಿರತಕ್ಕಂಥ ಹೋರಾಟಗಳಾಗಲೀ ಬಹಳ ದೊಡ್ಡ ಸಾಕ್ಷಿಯಾಗಿವೆ ವಿಶೇಷವಾಗಿ, ತೀರ್ಪು ಆಗಿದೆ ನಾವು ಒಂದು ರೀತಿಯ ಶವದ ಮನೆಯಲ್ಲಿ ಕುಳಿತುಕೊಂಡು ಕಣ್ಣೀರು ಸುರಿಸುವಂಥ ಪರಿಸ್ಥಿತಿಯಲ್ಲಿ ಇವತ್ತು ನಾವು ಇದ್ದೇವೆ ತೀರ್ಪಿನ ನಂತರ ಈಗೇನಾಗಬೇಕು ಎನ್ನುವ ಬಗ್ಗೆ ಈಗಾಗಲೇ ಅನೇಕರು ಹೇಳಿದ್ದಾರೆ ತೀರ್ಪು ಹೇಗೆ ಬಂದಿದೆ, ಈಗಾಗಲೇ ವೈಜ್ಞಾನಿಕ ದೃಷ್ಟಿಯಿಂದ ಎಷ್ಟರ ಮಟ್ಟಿಗೆ ಸಮಂಜಸವಾಗಿದೆ, ಇದರ ಬಗ್ಗೆ ಈಗಾಗಲೇ ಬೆಳಕು ಚೆಲ್ಲುವಂಥ ಪ್ರಯತ್ನವನ್ನು ನನಗಿಂತ ಮೊದಲು ಮಾತನಾಡಿರತಕ್ಕಂಥ ಎಲ್ಲಾ ನಾಯಕರುಗಳು ಕೂಡ ಈ ಶಾಸನಸಭೆಯಲ್ಲಿ ಮಾಡಿದ್ದಾರೆ ಈ ತೀರ್ಪಿಗೆ ಮೂಲ 1892 ಮತ್ತು 1924ನೇ ಇಸವಿಯಲ್ಲಿ ಬ್ರಿಟಿಷ್ ಆಡಳಿತದಲ್ಲಿ ಮೈಸೂರು ರಾಜ್ಯ ಹಾಗು ಮದ್ರಾಸ್ ಪ್ರೆಸಿಡೆನ್ಸಿ ನಡುವೆ ಆದಂಥ ಒಪ್ಪಂದವನ್ನು ಮೂಲವಾಗಿ ಮಾಡಿಕೊಂಡಿರುವಂಥ ಬಹಳ ದೊಡ್ಡ ತಪ್ಪು ಎಂದು ನಮ್ಮ ಮೇಲ್ನೋಟಕ್ಕೆ ಗೊತ್ತಾಗುತ್ತದೆ, ಏಕೆಂದರೆ ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಬ್ರಿಟಿಷರನ್ನು ಓಡಿಸಿ ನಮ್ಮನ್ನು ನಾವೇ ಆಳಿಕೊಳ್ಳಲಿಕ್ಕೆ ಪ್ರಾರಂಭ ಮಾಡಿದ ನಂತರ, ನಮ್ಮದೇ ಸಂವಿಧಾನ, ನಮ್ಮ ಕಾನೂನು ರಚನೆ ಮಾಡಿದ ನಂತರ ಅವೆಲ್ಲವೂ ಕೂಡ ಹೋಗಬೇಕಾಗಿತ್ತು ಸ್ವಾತಂತ್ರ್ಯಾನಂತರ ಇದರದೇ ಆದ ವಿವೇಚನೆಯಡಿಯಲ್ಲಿ ಬೇರೆ ಬೇರೆ ರಾಜ್ಯಗಳು, ರಾಜ್ಯಗಳ ನಡುವಿನ ಜಲದ ನೆಲದ ಪ್ರಶ್ನೆಗಳನ್ನು ಕೂತು ಚರ್ಚೆ ಮಾಡಬೇಕಾಗಿತ್ತು ಅದನ್ನು ಬಿಟ್ಟು ಇವತ್ತು ತೀರ್ಪು

ನೀಡಿರುವುದು ಎಷ್ಟು ಸಮಂಜಸವೆಂದು ನಾವೀಗ ಚರ್ಚೆ ಮಾಡ ಬೇಕಾಗುತ್ತದೆ ಇದು ಒಕ್ಕೂಟದ ಬಗ್ಗೆ ನಮ್ಮಲ್ಲಿರುವ ಸಾಮಾನ್ಯ ನಂಬಿಕೆಯನ್ನೇ ಕಲುಕುತ್ತಿರುವ ಒಂದು ಪ್ರಶ್ನೆ ಆದ್ದರಿಂದ ಇಂತಹ ತೀರ್ಪು ಕೊಡುವಾಗ ತೀರ್ಪು ಕೊಡುವವರು ವಿಶೇಷವಾಗಿ ಗಮನಿಸಬೇಕಾಗಿತ್ತು ಇದೆಲ್ಲದರ ಹಿನ್ನೆಲೆಯಲ್ಲಿ ತೀರ್ಪು ಕೊಡಬೇಕಾಗಿತ್ತು ದುರ್ದೈವದ ಸಂಗತಿಯೆಂದರೆ ನಮ್ಮ ರಾಜ್ಯದ ರಾಜಕಾರಣಿಗಳ ಲಾಬಿಯಾಗಲಿ ಅಧಿಕಾರಿಗಳ ಲಾಬಿಯಾಗಲಿ ಪ್ರಭಾವಶಾಲಿಯಾಗಿ ಇದುವರೆಗೂ ಕಾರ್ಯನಿರ್ವಹಿಸಿಲ್ಲ ಇವತ್ತಿನ UPA ಸರ್ಕಾರದಲ್ಲಿ ನಮ್ಮ ಪಾಲು ಏನೂ ಇಲ್ಲವೆಂಬುದು ಗೊತ್ತಿದೆ ಇವತ್ತು ತಮಿಳುನಾಡು ಹೇಳಿದಂತೆ ಕೇಳುವುದು ನಡೆದಿದೆ ಇಂಥಾದ್ದರಲ್ಲಿ ತಮಿಳುನಾಡಿನವರು ಬಹಳ ನಿಸ್ಸೀಮರು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ ನೆನ್ನೆ ದಿನ ನೋಡಿದೆವು ತಮಿಳುನಾಡು ಎಷ್ಟು ಪ್ರಭಾವಿಯಾಗಿದೆ ಎಂದರೆ ಸಂಸತ್ತಿನಲ್ಲಿ ಪಶ್ಚಿಮ ಬಂಗಾಳದಲ್ಲಿರುವ ಸಮುದ್ರ ಅಧ್ಯಯನದ ವಿಶ್ವವಿದ್ಯಾಲಯವನ್ನು ತಮಿಳುನಾಡಿಗೆ ವರ್ಗ ಮಾಡುವ ಬಿಲ್ ತಂದುಬಿಟ್ಟಿದ್ದಾರೆ ಅದು UPA ನಲ್ಲಿರುವ ಅಂಗಪಕ್ಷಗಳ ಗಮನಕ್ಕೆ ತಂದಿಲ್ಲ ಇದು ಪಶ್ಚಿಮ ಬಂಗಾಳದ ಸಂಸತ್ತದಸ್ಯರಿಗೇ ಗೊತ್ತಿಲ್ಲ, ಇದರಿಂದ ಅಲ್ಲಿ ತುಂಬ ಗಲಭೆಯಾಗಿದೆ ಈ ರೀತಿ ತಮಿಳುನಾಡು ಬಹಳ ವ್ಯವಸ್ಥಿತವಾಗಿ ತನ್ನ ರಾಜ್ಯದ ಹಿತಕ್ಕಾಗಿ ಸೌಲಭ್ಯ ಪಡೆಯುವುದಕ್ಕಾಗಿ, ಕುಳಿತು ಚಿಂತನೆ ಮಾಡುತ್ತಾ ಬಂದಿದೆ 1974ರ ಮಧ್ಯಂತರ ತೀರ್ಪೂ ಕರ್ನಾಟಕಕ್ಕೆ ನ್ಯಾಯ ಒದಗಿಸಿತು ಎಂದು ಹೇಳಲು ಆಗುವುದಿಲ್ಲ ತಮಿಳುನಾಡಿಗೆ ನೀರು ಬಿಡುವುದಕ್ಕೇ ಕರ್ನಾಟಕದ ಅಣೆಕಟ್ಟುಗಳಿರುವುದು ಎಂದು ಅದರಲ್ಲಿ ಹೇಳಿದ್ದಾರೆ ನೀರು ಮನುಷ್ಯ ನಿರ್ಮಿತವೇನಲ್ಲ, ಪ್ರಕೃತಿ ನಿರ್ಮಿತವಾದದ್ದು ಒಂದೊಂದ್ಸಾರಿ ಮಳೆನೇ ಬರದಿದ್ದರೆ ಏನು ಮಾಡುವುದು? ಎಷ್ಟು ನೀರು ಬಿಡಬೇಕು ಎಂಬ ಪೂರ್ವ ಅಂದಾಜಿಲ್ಲದೇ ತೀರ್ಪು ಕೊಟ್ಟಿದ್ದಾರೆ ಸಂಕಷ್ಟ ಸಂದರ್ಭವನ್ನು ನಾವೆಲ್ಲರೂ ಹಂಚಿಕೊಳ್ಳಬೇಕಾಗಿತ್ತು Interim orderನಲ್ಲಿ ತಮಿಳುನಾಡಿಗೆ 205 TMC ನೀರು ಮೆಟ್ಟೂರಿಗೆ ಬಿಡಲು ತಿಳಿಸಿದರು ಆಗ ಷರತ್ತು 11 20 ಲಕ್ಷ ಎಕರೆ ನಮಗೆ ಅಚ್ಚುಕಟ್ಟು ಮಾಡಿಕೊಳ್ಳುವಂತೆ ತಿಳಿಸಿದ್ದರು ಅಂತ ಕಾಣುತ್ತದೆ

ಶ್ರೀ ಸಿದ್ದರಾಮಯ್ಯ Interim orderನಲ್ಲಿ ನಮಗೆ 18 85 ಲಕ್ಷ ಎಕರೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ ತಮಿಳುನಾಡಿಗೆ 24 71 ಲಕ್ಷ ಎಕರೆ ಲೆಕ್ಕಕ್ಕೆ ತಗೊಂಡಿದ್ದಾರೆ

ಶ್ರೀ ಆರಗ ಜ್ಞಾನೇಂದ್ರ ನಮಗೆ ನೀರು ಅಲಾಟ್ ಮಾಡುವಾಗ ಇಂಥದೇ ಬೆಳೆ ಬೆಳೆಯಿರಿ ಎಂದು ನಿರ್ದೇಶನ ಕೊಟ್ಟಿದ್ದಾರೆ ತಮಿಳುನಾಡಿಗೆ ಇಂಥದ್ಯಾವುದನ್ನೂ ಕೊಟ್ಟಿಲ್ಲ ಈ ತೀರ್ಪು ಹೇಗೆ ಅವೈಜ್ಞಾನಿಕ ಎಂದರೆ 30 TMC ನೀರು ಕೇರಳಕ್ಕೆ ಕೊಡಬೇಕಾಗಿತ್ತು, ಅವರು ಅಣೆಕಟ್ಟು ಕಟ್ಟುವವರೆಗೆ ಕರ್ನಾಟಕ ಉಪಯೋಗಿಸಿಕೊಳ್ಳಿ ಎಂದು ಹೇಳಬಹುದಾಗಿತ್ತು ಆದರೆ ಅದನ್ನು ತಮಿಳುನಾಡಿಗೆ ಬಿಡಿ ಎಂದಿರುವುದು ಎಷ್ಟು ಸಮಂಜಸ? ಹೀಗಾಗಿ ಈ ತೀರ್ಪು ಏಕಪಕ್ಷೀಯವಾದದ್ದು ಎಂಬುದು ನಮಗೆಲ್ಲ ಗೊತ್ತಿದೆ ಬೆಂಗಳೂರು ನಗರಕ್ಕೆ ಕಾವೇರಿ ವರದಾನ, ಬೆಳೆಯುತ್ತಿರುವ ನಗರ, ಇನ್ನು ಅನೇಕ ವರ್ಷಗಳಲ್ಲಿ ಅದ್ಭುತ ಜನಸಂಖ್ಯೆ ಹೊಂದಲಿದೆ ಬೆಂಗಳೂರಿನಲ್ಲಿ ಈಗ ಸರ್ವೆ ಮಾಡಿದರೆ 30–40% ತಮಿಳರೇ ಇಲ್ಲಿ ವಾಸಿಸುತ್ತಾರೆ

ಶ್ರೀ ಸಿದ್ದರಾಮಯ್ಯ :– ಮನುಷ್ಯರು ಎಂದರೆ ಎಲ್ಲರೂ ಒಂದೇ

ಶ್ರೀ ವಿ ಸೋಮಣ್ಣ ಬೆಂಗಳೂರಿನಲ್ಲಿ 80 ಲಕ್ಷ ಜನಸಂಖ್ಯೆ ಇದೆ, ಅದರಲ್ಲಿ ಒಂದನೇ ಮೂರು ಭಾಗ ಮಾತ್ರ ಪರಿಗಣನೆಗೆ ತಗೊಂಡು ಬಾಕಿ, ಬೆಂಗಳೂರಿನಲ್ಲಿರುವ ಜನಸಂಖ್ಯೆಯನ್ನು ಅವರು ಗಣನೆಗೆ ತಗೊಂಡಿಲ್ಲ, ಬೆಂಗಳೂರಿಗೆ ಬೇರೆ ಯಾವುದೇ ನೀರಿನ ಸೋರ್ಸಸ್ ಇಲ್ಲ, ಆದ್ದರಿಂದ ತಪ್ಪು ಗಹಿಕೆಯಿಂದ ಅವೈಜ್ಞಾನಿಕವಾಗಿ ನೀಡಿದ್ದಾರೆಂದು ಹೇಳೋಣ ಬೆಂಗಳೂರಿನಲ್ಲಿ ವಿಶ್ವದೆಲ್ಲ ಜನ ವಾಸಿಸುತ್ತಿದ್ದಾರೆ

ಶ್ರೀ ಆರಗ ಜ್ಞಾನೇಂದ್ರ ನಾನು ಹೇಳಿದ್ದು, ನಮ್ಮ ಜತೆಯಲ್ಲೇ ವಾಸಮಾಡುತ್ತಿರುವ ಆ ಜನರನ್ನೂ ಸೇರಿಸಿ ನಮಗೆ ಕುಡಿಯಲು ನೀರಿಲ್ಲ, ಅನ್ನವಿಲ್ಲದೇ ಎರಡು ದಿನ ಬದುಕಿಬಿಡಬಹುದು, ನೀರು ಗಾಳಿಯಿಲ್ಲದೆ ಬದುಕಲು ಸಾಧ್ಯವಿಲ್ಲ ಮೂಲಭೂತ ಅವಶ್ಯಕತೆಯಾದ ನೀರನ್ನು ಹಂಚಿಕೆ ಮಾಡುವುದರಲ್ಲಿ ಇದನ್ನೆಲ್ಲ ಪರಿಗಣಿಸಬೇಕಾದ ಅವಶ್ಯಕತೆಯಿತ್ತು ಆದರೆ ಯಾವುದನ್ನೂ ಆಲೋಚನೆ ಮಾಡದೇ ಒಂದು ರೀತಿಯ ಪಕ್ಷಪಾತ ಧೋರಣೆ ಅನುಸರಿಸಿರುವುದು ಕಾಣುತ್ತೇವೆ 1974ರಲ್ಲಿ ಕೇಂದ್ರ ಜಲಸಂಪನ್ಮೂಲ ಕಾರ್ಯದರ್ಶಿ ತಮಿಳುನಾಡು ಸುಮಾರು 100 TMC ನೀರು ಪೋಲು ಮಾಡುತ್ತಿದೆ ಎಂದು ವರದಿ ಕೊಟ್ಟಿದ್ದರು ನಮ್ಮ ನ್ಯಾಯವಾದಿಗಳು ಅದನ್ನು ಉಲ್ಲೇಖಿಸಿದಾಗಲೂ ಅದನ್ನು ಪರಿಗಣಿಸಲಿಲ್ಲ

ಮೊದ ಮೊದಲಿಗೆ ತೀರ್ಪು ಬಂದಾಗ ನಮ್ಮ ವಕೀಲರು ಚೆನ್ನಾಗಿ ವಾದ ಮಂಡಿಸಿಲ್ಲವೆಂಬ ಅಭಿಪ್ರಾಯ ನಮ್ಮಲ್ಲಿತ್ತು ಆದರೆ ಅವರು ಸಮಂಜಸವಾಗಿ ಕರ್ನಾಟಕದ ಪರ ವಾದವಿದ್ದರೂ ಅನೇಕ ಕಡೆ ನ್ಯಾಯಮಂಡಳಿ ಅದನ್ನು ಒಪ್ಪಿದರೂ ತೀರ್ಪು ಬರೆಯುವಾಗ, ಪರಿಗಣಿಸಿಲ್ಲದಿರುವುದು ನೋಡುತ್ತೇವೆ ಇವತ್ತು ತಮಿಳುನಾಡಿನಲ್ಲಿ ಕುರುವಾಯಿ ಸಾಂಬ ಮತ್ತೊಂದು, ಹೀಗೆ ಮೂರು ಬೆಳೆ ಬೆಳೆಯುತ್ತಾರೆ, ಈ ತೀರ್ಪು ಅನುಷ್ಠಾನಕ್ಕೆ ಬಂದರೆ ಕಾವೇರಿ ಕೊಳ್ಳದ ರೈತರು ಒಂದಾದರೂ ಬೆಳೆ ಬೆಳೆಯಲು ಆಗುವುದಿಲ್ಲ ಎಂಬ ಭಯ ಇವತ್ತು ಮೂಡಿದೆ ತೀರ್ಪಿನ ಹಿನ್ನೆಲೆಯಲ್ಲಿ ಇವತ್ತು ಚರ್ಚೆ ನಡೆಯುತ್ತಿದೆ ಕರ್ನಾಟದಕವರ ಶಾಂತ ಸ್ವಭಾವವನ್ನು ಯಾರೂ ಕೂಡ ದುರ್ಬಳಕೆ ಮಾಡಿಕೊಳ್ಳಬಾರದು ಒಕ್ಕೂಟ ವ್ಯವಸ್ಥೆಯಲ್ಲಿ ನಾವು ಈ ದೇಶವನ್ನು ಪ್ರೀತಿಸುವ ಜನ, ನೆಲ ಜಲಗಳ ಪ್ರಶ್ನೆ ಬಂದಾಗ ನಮ್ಮನ್ನು ವಿಶೇಷವಾಗಿ ಪರಿಗಣಿಸಬೇಕಾದ ಅವಶ್ಯಕತೆಯಿದೆ ಹೀಗಾಗಿ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ಮೂರ್ನಾಲ್ಕು ರಾಜ್ಯಗಳನ್ನು ಸೇರಿಸಿ ತೀರ್ಮಾನ ಮಾಡಬೇಕಾಗುತ್ತದೆ ಹಿಂದಿನ ವಾಜಪೇಯಿ ಸರ್ಕಾರ ಈ ಬಗ್ಗೆ ಪರಿಗಣಿಸಲಿಲ್ಲ ಎಂದು ಹೇಳಿದರು ಆ ಸರ್ಕಾರ ದೇಶದ ಜಲನೀತಿ ರೂಪಿಸುವ ಸನ್ನಾಹದಲ್ಲಿತ್ತು ಗಂಗಾನದಿಯನ್ನು ಕಾವೇರಿಗೆ ಜೋಡಿಸುವ ಬಹಳ ದೊಡ್ಡ ಯೋಜನೆ ಇನ್ನೇನು ಕಾರ್ಯಗತವಾಗುತ್ತದೆ ಅನ್ನುವುದರೊಳಗೆ ಅವರ ಸರ್ಕಾರ ಹೋಯಿತು ಈ ಹಿನ್ನೆಲೆಯಲ್ಲಿ, ಅಂದು ವಾಜಪೇಯಿ ಸರ್ಕಾರ ಆಲೋಚನೆ ಮಾಡಿತ್ತು ಆದರೆ ಅದನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ, ಅದಕ್ಕೆ ಇತಿಮಿತಿಗಳಿದ್ದವು, ಜನತಂತ್ರ ವ್ಯವಸ್ಥೆಯಡಿ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಬಹುದು ಇಲ್ಲದಿರಬಹುದು, ಆದರೆ ಈ ದೇಶದ ಸರ್ಕಾರ ವಿವೇಚನೆಯಿಂದ ಯೋಚನೆ ಮಾಡುವ ಅವಶ್ಯಕತೆ ಇದೆ ಎಂಬುದು ನನ್ನ ಅಭಿಪ್ರಾಯ ಹಾಗಾಗಿ 5 2 2007 ರ ಕಾವೇರಿ ನ್ಯಾಯಾಧೀಕರಣದ ತೀರ್ಮಾನದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇಡೀ ದೇಶಕ್ಕೆ ಜಲ ನೀತಿ ರೂಪಿಸಿ ಅಂತರ್ ರಾಜ್ಯ ನದಿ ವಿವಾದಗಳನ್ನು ಆ ನೀತಿಯ ಕೆಳಗೆ ಅಥವಾ ಪರಸ್ಪರ ಸಹಕಾರದೊಡನೆ ಇತ್ಯರ್ಥ ಮಾಡುವವರೆಗೆ ಖಂಡಿತವಾಗಿಯೂ ಈ ಆದೇಶವನ್ನು ಜಾರಿಗೆ ಕೊಡುವಂಥದ್ದನ್ನು ತಡೆಹಿಡಿಯಬೇಕಾಗುತ್ತದೆ ಈ ರೀತಿಯ ಒಂದು ನಿರ್ಣಯವನ್ನು ನಾವು ಕರ್ನಾಟಕ ರಾಜ್ಯದ ಶಾಸನಸಭೆಯಲ್ಲಿ ತೆಗೆದುಕೊಳ್ಳತಕ್ಕ ಅವಶ್ಯಕತೆ ಇದೆ ಅದುದರಿಂದ ಕೇಂದ್ರದ ಮೇಲೆ ಕೂಡ

ಇದರ ಒಂದು ಒತ್ತಡವನ್ನು ಎಲ್ಲ ರೀತಿಯಿಂದ ತರತಕ್ಕ ಅವಶ್ಯಕತೆ ಇದೆ ಒಟ್ಟಾರೆ ನಮ್ಮ ಚರ್ಚೆ ಬಹಳ ಆರೋಗ್ಯಪೂರ್ಣವಾಗಿ ನಡೆದಿದೆ ಎಂದು ನಾನು ಭಾವಿಸುತ್ತೇನೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಕೂಡ ಒಂದು ಅಪಸ್ವರವೂ ಕೂಡ ಬಾರದೇ ಇದ್ದಂಥ ರೀತಿಯಲ್ಲಿ ನಮ್ಮ ಎಲ್ಲ ಪಕ್ಷಗಳೂ ಒಂದೇ ರೀತಿಯಿಂದ ನಾವು ವಿಚಾರವನ್ನು ತೆಗೆದುಕೊಂಡು ಹೋಗಿದ್ದೇವೆ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುವಂಥದ್ದನ್ನು ನಾವು ಎಲ್ಲಿಯೂ ಕೂಡ ಸಹಿಸುವುದಿಲ್ಲ ಇದು ಕೇವಲ ರೈತರ ಮಾತಲ್ಲ ರೈತರಿಗೆ ಬೆಳೆ ಹಾನಿಯಾಗುತ್ತದೆ, ಎಂಬ ವಿಚಾರ ಮಾತ್ರವಲ್ಲ ಕುಡಿಯುವ ನೀರಿನಿಂದ ಹಿಡಿದು ಇಲ್ಲಿಯ ಅಭಿವೃದ್ಧಿಯ ದೃಷ್ಟಿಯಿಂದ ಎಲ್ಲ ದೃಷ್ಟಿಯಿಂದಲೂ ಕೂಡ ವ್ಯಾಪಕವಾಗಿ ಕರ್ನಾಟಕದ ಅಭಿವೃದ್ಧಿಯ ದೃಷ್ಟಿಯಿಂದ ನಾವು ಆಲೋಚನೆಯನ್ನು ಮಾಡಬೇಕಾಗುತ್ತದೆ ಈ ಹಿನ್ನೆಲೆಯಲ್ಲಿ ಬಹುಶ ಕೇಂದ್ರ ಸರ್ಕಾರ ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಪಾರ್ಲಿಮೆಂಟಿನ ನಮ್ಮ ಸದಸ್ಯರುಗಳು ಕೂಡ ಅಲ್ಲಿ ಪ್ರತಿಭಟನೆ ಮಾಡಿದ್ದಾರೆ, ಧರಣಿ ಮಾಡಿದ್ದಾರೆ ಪಾರ್ಲಿಮೆಂಟಿನಲ್ಲಿ ಕೂಡ ಸಾಕಷ್ಟು ದೊಡ್ಡ ರೀತಿಯಿಂದ ಪ್ರತಿಭಟನೆ ಮಾಡಿದ್ದಾರೆ ಈ ಎಲ್ಲದರ ಹಿನ್ನೆಲೆಯಲ್ಲಿ ವರದಿ ತರಿಸಿ ನಮಗೆ ನ್ಯಾಯ ದೊರಕುವವರೆಗೆ ಈ ಆದೇಶವನ್ನು ಯಾವುದೇ ಕಾರಣಕ್ಕಾಗಿ ಜಾರಿಗೆ ಕೊಡಬಾರದು ಮತ್ತು ಅದನ್ನು ಜಾರಿಗೆ ಕೊಟ್ಟಾಗ ನಾವು ಅದು ಜಾರಿಯಾಗಲಿಕ್ಕೆ ಖಂಡಿತವಾಗಿಯೂ ಒಪ್ಪುವುದಿಲ್ಲ ಎನ್ನುವಂಥ ಒಕ್ಕೊರಲಿನ ನಿರ್ಣಯ ಶಾಸನಸಭೆಯಲ್ಲಿ ಆಗಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ರಾಜ್ಯದ ಮಹಾ ಜನತೆಗೆ ನಾನು ಶಾಸಕನಾಗಿ ಅಭಿನಂದಿಸುತ್ತೇನೆ ಏಕೆಂದರೆ ಇಷ್ಟೆಲ್ಲ ಆದಾಗಲೂ ಕೂಡ ಯಾವುದೇ ಪ್ರಾಣ ಹಾನಿ, ಆಸ್ತಿ ಹಾನಿ ಯಾವುದೂ ಕೂಡ ಆಗದೇ ಇರುವ ರೀತಿಯಲ್ಲಿ ಜನತಂತ್ರ ವ್ಯವಸ್ಥೆಯಲ್ಲಿ ಪ್ರತಿಭಟನೆಯನ್ನು ಜನ ಜೀವನ ತೀರಾ ಅಸ್ತವ್ಯಸ್ತ ಆಗದೇ ಇದ್ದ ರೀತಿಯಲ್ಲಿ ನಮ್ಮ ಭಾವನೆಗಳನ್ನು ವ್ಯಕ್ತಮಾಡುತ್ತಿದ್ದೇವೆ ಇವತ್ತು ಕೂಡ ಅದು ನಡೆಯುತ್ತಿದೆ ಬೇರೆ ಬೇರೆ ವರ್ಗದ ಎಲ್ಲ ಸ್ತರದ ಜನರು ಕೂಡ ಎದ್ದು ನಿಂತು ಈ ಹೋರಾಟಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ ಹಳ್ಳಿಯಿಂದ ದೆಹಲಿಯವರೆಗೆ ಈ ಹೋರಾಟ ಅವ್ಯಾಹತವಾಗಿ ನಡೆಯುತ್ತಿದೆ ಹೀಗಾಗಿ ಈ ಒಕ್ಕೂಟದ ವ್ಯವಸ್ಥೆಗೆ ಭಂಗ ಬರದೇ ಇದ್ದ ರೀತಿಯಲ್ಲಿ ಈ ದೇಶವನ್ನು ಪ್ರೀತಿಸತಕ್ಕ ಕರ್ನಾಟಕ ರಾಜ್ಯದ ಜನರ ಮನಸ್ಸಿನಲ್ಲಿ ಒಂದು ಕಳಂಕ ಬೇರೂರುವಂಥ ರೀತಿಯಲ್ಲಿ ಆಗದೇ ಒಂದು ಸಮಂಜಸವಾಗಿ ಇದು

ಇತ್ಯರ್ಥ ಆಗಬೇಕೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಒಂದು ಒಳ್ಳೆಯ ನಿರ್ಣಯವನ್ನು ಈ ಶಾಸನಸಭೆ ತೆಗೆದುಕೊಂಡು ಇವತ್ತು ಆದ ಚರ್ಚೆಯನ್ನು ಕೇಂದ್ರ ಸರ್ಕಾರ ಗಮನಿಸಬೇಕು ತಮಿಳುನಾಡಿನ ಸರ್ಕಾರವೂ ಕೂಡ ಇದನ್ನು ಗಮನಿಸಿ ಯಾವುದಾದರೂ ಒಂದು ಕಡೆ ರಾಜಿ ಪ್ರಯತ್ನಕ್ಕೆ ಅದು ಕೂಡ ಬರುವಂಥ ವ್ಯವಸ್ಥೆಯಾಗಬೇಕು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ನದಿ ಹುಟ್ಟುವಂಥ ಭೂ ಭಾಗದಲ್ಲಿ ನಾವಿದ್ದೇವೆ ಹಾಗಾಗಿ ಈ ಭಾಗಕ್ಕೆ ಅನ್ಯಾಯವನ್ನು ಮಾಡಿ ಇನ್ಯಾವುದೋ ಒಂದು ಭಾಗಕ್ಕೆ ನ್ಯಾಯ ದೊರಕಿಸುತ್ತೇವೆನ್ನುವುದು ಖಂಡಿತವಾಗಿಯೂ ಸಲ್ಲದು ವಿಶೇಷವಾಗಿ ನಮ್ಮ ಹಿಂದಿನ ಎಲ್ಲ ಸರ್ಕಾರಗಳೂ ಕೂಡ ಇದರ ಬಗ್ಗೆ ಕಾಳಜಿಯನ್ನು ವಹಿಸಲಿಲ್ಲ ಎನ್ನುವಂಥದ್ದನ್ನು ಅನೇಕ ಸಾರಿ ಹೇಳಿದೆ ಏಕೆಂದರೆ ಅಣೆಕಟ್ಟನ್ನು ಕಟ್ಟಿದ್ದೇವ ಅಚ್ಚುಕಟ್ಟನ್ನು ನಿರ್ಮಾಣ ಮಾಡಿಕೊಳ್ಳಲಿಲ್ಲ ಇವತ್ತು ಸಾಕಷ್ಟು ಅಚ್ಚುಕಟ್ಟನ್ನು ನಿರ್ಮಾಣ ಮಾಡಿಕೊಂಡಿದ್ದರೆ ಆ ಅಚ್ಚುಕಟ್ಟನ್ನು ಪರಿಗಣನೆಗೆ ತೆಗೆದುಕೊಳ್ಳದೇ ತೀರ್ಪನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ ಆದರೆ ನಾವು ಒಂದೊಂದು ನದಿಯ ಡ್ಯಾಮನ್ನು ಕಟ್ಟುವಾಗಲೂ ಕೂಡ 15–20 ವರ್ಷಗಳನ್ನು ಕಳೆದಿದ್ದೇವೆ ಇವತ್ತು ಕೃಷ್ಣಾ ಬೇಸಿನ್‌ನಲ್ಲಿ ನಾವು ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದೇವೆಂದು ನೋಡುತ್ತಿದ್ದೇವೆ ಯಾವುದೋ ಒಂದು ಬದ್ಧತೆ ಇಲ್ಲದೇ ಇದ್ದ ರೀತಿಯಲ್ಲಿ ನಾವೆಲದಲೋ ಒಂದು ಕಡೆ ಹೋಗುತ್ತಿದ್ದೇವೆಂದು ಹೇಳಿ ನಮಗೆ ನಾವೇ ಆತ್ಮಾವಲೋಕನ ಮಾಡಿಕೊಳ್ಳತಕ್ಕ ಸಂದರ್ಭವೂ ಕೂಡ ಇದು ಆಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ (ಮುಂಡರಗಿ) ಮಾನ್ಯ ಅಧ್ಯಕ್ಷರೇ, "ಕಾಗೆ ಒಂದು ಅಗುಳ ಕಂಡರೆ ಕರೆಯದೆ ತನ್ನ ಬಳಗವನ್ನೆಲ್ಲ, ಕೋಳಿ ಒಂದು ಗುಟುಕ ಕಂಡರೆ ಕರೆಯದೆ ತನ್ನ ಕುಲವನ್ನೆಲ್ಲವ, ಶಿವಭಕ್ತನಾಗಿ ಭಕ್ತಿ ಪಕ್ಷವಲ್ಲದಿದ್ದರೆ ಆ ಕಾಗೆ ಕೋಳಿಗಳಿಗಿಂತ ಕರ ಕಷ್ಟ ಕೂಡಲ ಸಂಗಮದೇವ" ಬಸವಣ್ಣನವರು ಹೇಳಿದ ಈ ಮಾತನ್ನು ಇವತ್ತು ನಾವೆಲ್ಲ ನೆನೆಸಿಕೊಳ್ಳಬೇಕಾಗಿದೆ ನಮ್ಮದು ಒಕ್ಕೂಟ ವ್ಯವಸ್ಥೆ ಈ ದೇಶದಲ್ಲಿರುವ ಎಲ್ಲ ಸ್ವತ್ತು ನಾವು ಸಮನಾಗಿ ಹಂಚಿಕೊಂಡು ಉಣ್ಣಬೇಕು ಅದನ್ನೇ ಶರಣರು ಹೇಳುತ್ತಾರೆ ಆ ಕಾಗೆ ಕೋಳಿಗಳಿಗಿಂತ ನಾವು ಈಗ ಕೆಟ್ಟವರಾಗಿದ್ದೇವೆ

ಒಂದು ಕಾಗೆ ನಾವ್ಯಾರೂ, ಅದರತ್ತ ಲಕ್ಷ್ಯ ಹಾಕುತ್ತಿಲ್ಲ ಶರಣರು ಅದನ್ನು ಕಂಡುಕೊಂಡಿದ್ದಾರೆ ಒಂದು ಕಾಗೆಗೆ ಒಂದು ಸಣ್ಣ ಆಹಾರ ಎಲ್ಲಿಯಾದರೂ ಸಿಕ್ಕಿದರೆ ಕಾ ಕಾ ಎಂದು ಕರೆದು ಎಲ್ಲರನ್ನೂ ಕೂಡಿಕೊಂಡು ಉಣ್ಣುತ್ತದೆ ನೋಡಿ, ಹೇಗೆ ಉದಾ ಗೆ ಹೇಳುತ್ತಾರೆ ಅದೇ ರೀತಿ ಒಂದು ಕೋಳಿ ಎಂದೂ ತಾನೊಂದೇ ತಿನ್ನುವುದಿಲ್ಲ ಎಲ್ಲಿಯಾದರೂ ಆಹಾರ ಸಿಕ್ಕಿದರೆ ಕೊ ಕೊ ಎಂದು ಎಲ್ಲರನ್ನು ಕರೆದು ಎಲ್ಲ ಕೋಳಿಗಳನ್ನು ಕೂಡಿಸಿಕೊಂಡು, ಅದು ಊಟವನ್ನು ಮಾಡುತ್ತದೆ ಆದರೆ ಅದು ಮಾನವರಲ್ಲಿ ಹೋಗಿದೆ ಅದಕ್ಕೆ ಈ ನ್ಯಾಯ ನನಗೆ ಸಿಕ್ಕಿದ್ದು ಸಿಕ್ಕಿತು, ನಾನು ಹೊಡೆದುಕೊಂಡರೆ ಆಯಿತು, ಇನ್ಯಾರೋ ಹಾಳಾದರೇನು, ಸತ್ತರೇನು ಎನ್ನುವ ಲೆಕ್ಕ ಇವತ್ತು ಈ ಒಂದು ತೀರ್ಪಿನಿಂದ ನಮಗೆ ಕಾಣುತ್ತದೆ ಬಸವಣ್ಣನವರು ಒಂದು ಕಡೆ ಹೇಳುತ್ತಾರೆ 'ನ್ಯಾಯ ನಿಷ್ಠುರ ದಾಕ್ಷಿಣ್ಯ ಪರ ನಾನಲ್ಲಯ್ಯ' ಎಂದು ಹೇಳುತ್ತಾರೆ Judgment ಕೊಡುವವರು ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗಬಾರದು Judgment ಬರೆಯತಕ್ಕ Judgesಗಳು ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗಬಾರದು ಯಾವುದೇ ರಾಗ ದ್ವೇಷಗಳು ಅವರ ತಲೆಯಲ್ಲಿರಬಾರದು ಬಹುಶ ಹಾಗೆ ಇರುತ್ತಾರೆ ಎಂದು ತಿಳಿದುಕೊಂಡು ಈ ನ್ಯಾಯ ಮಂಡಳಿಯನ್ನು ನಾವು ನಂಬಿದ್ದೇವೆ ಇವರಿಗೆ ಯಾವ ರಾಗ ದ್ವೇಷವಿಲ್ಲ ಇವರೆಲ್ಲ ದಾಕ್ಷಿಣ್ಯ ಪರ ಅಲ್ಲ, ನ್ಯಾಯವಾಗಿ judgment ಅನ್ನು ಬರೆಯುತ್ತಾರೆಂದು ತಿಳಿದುಕೊಂಡು ನಾವೆಲ್ಲ ಒಪ್ಪಿದ್ದೇವೆ ಆದರೆ ಈ judgment ಅನ್ನು ಅವರು ಬರೆದಿರುವುದು ನೋಡಿದರೆ ನಮ್ಮ ನಿರೀಕ್ಷೆ ತಪ್ಪಾಗಿದೆ ಎಂದು ಅನಿಸುತ್ತದೆ ಬಹುಶ, ಪ್ರಜಾವಾಣಿ ಪತಿಕೆಯಲ್ಲಿ ನಮ್ಮ ಜಗದೀಶ್ ಅವರು ಬಹಳ ಚೆನ್ನಾಗಿ ಬರೆದಿದ್ದಾರೆ ಇದನ್ನು ಓದಿದರೆ ನಿಜವಾಗಿ ಅವರು ಸಂಪೂರ್ಣವಾಗಿ ಎಲ್ಲ ತರಹದ ದಾಕ್ಷಿಣ್ಯಕ್ಕೆ ಒಳಗಾಗಿದ್ದಾರೆಂದು ಅನಿಸುತ್ತದೆ 'ಕಾವೇರಿ ನ್ಯಾಯ ಮಂಡಳಿ ಸದಸ್ಯರ ನಡವಳಿಕೆ ಆಕ್ಷೇಪಾರ್ಹ ಎನ್ನುವಂತಿದೆ ಉದಾ ಗೆ ವಾದ ಪ್ರತಿವಾದ ಮುಗಿದು ಇನ್ನೇನು ತೀರ್ಪು ನೀಡಬೇಕೆನ್ನುವ ಹಂತದಲ್ಲಿ ಇಬ್ಬರು ಸದಸ್ಯರು ಮತ್ತೆ ಪ್ರವಾಸ ಮಾಡಬೇಕೆಂದು ವ್ಯರ್ಥ ಪ್ರಯತ್ನ ಮಾಡಿದ್ದೂ ಕೂಡ ತಮಿಳುನಾಡಿನಲ್ಲಿ ಅವರಿಗೆ ಹಿಂದೆ ದೊರೆತ ಸ್ವಾಗತ ಹಾಗೂ ಅವರು ಪಡೆದ ಉಡುಗೊರೆ ಅವರನ್ನು ಸಂಶಯದಿಂದ ನೋಡುವಂತೆ ಮಾಡಿದೆ ಹಿಂದೆ ನಮ್ಮ ಸರ್ಕಾರವಿದ್ದಾಗ ನಾನು ಮಂತ್ರಿಮಂಡಲದಲ್ಲಿದ್ದಾಗ ಇಲ್ಲಿ ನಾವು

7/24

ಅವರಿಗೆ ವ್ಯವಸ್ಥೆಯನ್ನು ಸರಿಯಾಗಿ ಮಾಡಲಿಲ್ಲ ಇಲ್ಲಿ ಈ ಕಡೆ ವಿರೋಧ ಪಕ್ಷದವರಿದ್ದಾಗ ನಮ್ಮನ್ನು ಬಯ್ದಾಡಿದ್ದರು ಅವರಿಗೆ ಸರಿಯಾಗಿ ವ್ಯವಸ್ಥೆಯನ್ನು ಮಾಡದೇ ಇದ್ದುದರಿಂದ ಆ interim ನೀರು ಬಿಡುವುದರಲ್ಲೇ, ಆಗಲೇ ನಮ್ಮ ವಿರುದ್ಧ ತೀರ್ಪು ಆಯಿತು ತಮಿಳುನಾಡಿನವರು ಅದನ್ನು ಸ್ವಾಗತ ಮಾಡಿದರು ಅವರಿಗೆಲ್ಲ ಉಡುಗೊರೆಯನ್ನು ಕೊಟ್ಟರು ಇದರ ಮಧ್ಯೆ ಏನೇನೊ ವಿಚಾರ ಬಂದಿತ್ತು ಆ ಒಂದು ದೃಷ್ಟಿಯಿಂದ ಇದೆಲ್ಲ ಉಡುಗೊರೆ ತೆಗೆದುಕೊಂಡಿದ್ದು, ನೋಡಿದರೆ ಖಂಡಿತವಾಗಿಯೂ ಅವರು ರಾಗ ದ್ವೇಷ ಇಲ್ಲದಂತೆ ಅವರು ಇದ್ದಿಲ್ಲ ಎನ್ನುವುದೂ ಕೂಡ ಈ judgment ಅನ್ನು ಓದಿದರೆ ನಮಗೆ ಕಾಣಿಸುತ್ತದೆ ಇಲ್ಲಿ ಬಹುಶ ಆ ವೇಳೆಯಲ್ಲಿ ಒಂದು ಮಾತು ನಮಗೆ ದೇವೇಗೌಡರು ಹೇಳಿದ್ದರು 'ಕೋರ್ಟಿಗೆ ಹೋಗಿದ್ದರು, ಮಂಡಳಿಯ ಸದಸ್ಯರ ಈ ವರ್ತನೆಯನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದು ಕೂಡ ಕರ್ನಾಟಕ ಅವರ ಕೆಂಗಣ್ಣಿಗೆ ಗುರಿಯಾಗಲು ಕಾರಣ ತಪ್ಪು ಮಾಡಿದ್ದಾರೆ ಎಂದು ಇದನ್ನು ತೆಗೆದುಕೊಂಡು ಕೋರ್ಟಿಗೆ ಹೋದರೆ ಅದರಿಂದ ಕೂಡ ಅವರಿಗೆ ದ್ವೇಷ ಹುಟ್ಟಿತು ಎನ್ನುವುದು ಇಲ್ಲಿ ಬರೆಯುತ್ತಿದ್ದಾರೆ ಈ ರೀತಿ ಅವರು ಮಾಡಿದ್ದರೆ ಖಂಡಿತವಾಗಿಯೂ ಆ ನ್ಯಾಯ ಮಂಡಳಿಯವರದು ಬಹಳ ದೊಡ್ಡ ತಪ್ಪು ಆ ರೀತಿಯಾಗಿ ಅವರು ಮಾಡಿದ್ದರೆ ನಿಜವಾಗಿ ಅದು ತಪ್ಪು ವಾಟಾಳರೇ, ಇಲ್ಲಿ ಸ್ವಲ್ಪ ಕೇಳಿ ನಾವು ಕಾಗೆ ಗುಬ್ಬಿಗಿಂತ ಕಡೆಯಾಗಿದ್ದೇವೆ ಇದು ಏನಾಗಿದೆ ಮೊದಲಿನಿಂದ ಬಹುಶ ಇಲ್ಲಿ ನಾನು ನೋಡುತ್ತಿದ್ದೇನೆ, ಇಲ್ಲಿ ನಮ್ಮ ಕರ್ನಾಟಕ ಸರ್ಕಾರದವರು ನೀರಾವರಿ ಇಲಾಖೆಯವರು ಇದನ್ನು ನೋಡಿದ್ದೀರೊ ಇಲ್ಲವೋ ಗೊತ್ತಿಲ್ಲ ತಾವು ಇದನ್ನು ನೋಡಿರಬೇಕು ನಿಮ್ಮ ಇಲಾಖೆಯವರೇ ಇದೊಂದು ಜಲ ವಿವಾದ 'ನೀರಿಗೆ ಶತಮಾನದ ತೀರದ ಬವಣೆ' ಎನ್ನುವ ಒಂದು ಪುಸ್ತಕವನ್ನು ಹಿಂದೆ ಹೊರಡಿಸಿದ್ದಾರೆ ತಾವು ಇದನ್ನು ನೋಡಿರಬೇಕು ಇದು ತಮ್ಮ ಕಡೆಗೆ ಬಂದೇ ಇರುತ್ತೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೇ, ಇವೆಲ್ಲವನ್ನೂ ನಾವು ಒಳಗಡೆ ಕೂತು ಮಾತನಾಡಿ confrontation ಆಗುವಂಥ ಚರ್ಚೆಯನ್ನು ಮಾಡಬಾರದು ಎಂದು ನಾವು ಸುಮ್ಮನೆ ಇದ್ದುದು ನಿಮ್ಮ ಮಾತನ್ನು ನಾವು ಕೇಳುತ್ತಿದ್ದೇವೆ ನೀವು ಅದನ್ನು ಕೇಳುತ್ತಿಲ್ಲ ಅಂದುಕೊಳ್ಳಬಾರದು ಅಧ್ಯಕ್ಷರು

ತಾವು ನಮಗೆ ಆದೇಶವನ್ನು ಕೊಟ್ಟಿರಿ ಟೀಕೆ ಮಾಡುವುದು, confront ಮಾಡುವುದನ್ನು ಕಡಿಮೆ ಮಾಡಿ ಎಂದು ಹೇಳಿದ್ದಕ್ಕೆ ನಾವು ಆ chapter ಅನ್ನು ಬಿಟ್ಟು ಮುಂದಕ್ಕೆ ಹೋದೆವು ಅಷ್ಟೆ

ಶ್ರೀ ಎಸ್ ಎಸ್ ಪಾಟೀಲ್ – ನಾನು ಮಾಡುತ್ತಿರುವುದು ಪೇಪರಿನಲ್ಲಿ ಬಂದಿದ್ದು ಇದೇನು ಟೀಕೆ, ಅಂಜಿಕೊಂಡು ಹೋಗೇ ನಮ್ಮ ಸ್ಥಿತಿ ಇಲ್ಲಗೆ ಬಂದಿದೆ ಪ್ರಸಂಗ ಬಂದರೆ ಇಲ್ಲಿ ಇನ್ನೂ ಒಂದು ವಿಚಾರವನ್ನು ಹೇಳಿ ಬಿಡುತ್ತೇನೆ ಕಡೆಗೆ ಇದನ್ನೂ ಓದಿ ಬಿಡುತ್ತೇನೆ ಆಮೇಲೆ ಓದ ಬೇಕು ಎಂದು ಅಂದುಕೊಂಡಿದ್ದೆ ಈಗಲೇ ಓದಿ ಬಿಡುತ್ತೇನೆ ಇಲ್ಲಿ ಒಬ್ಬ ಕವಿ ಬರೆಯುತ್ತಾರೆ "ಬೆಂಕಿ ಬಿದ್ದಿದೆ ಮನೆಗೆ, ಓ ಬೇಗ ಬನ್ನಿ, ಎದ್ದೋಡಿ ಬನ್ನಿ, ಎದ್ದೋಡಿ ಬನ್ನಿ ಕನ್ನಡ ಗಡಿ ಕಾಯೆ, ಜಲ ಕಾಯೆ, ನುಡಿ ಕಾಯೆ, ಕಾಯಲಾರೆನೋ, ತಾಯೇ ಬನ್ನಿ, ಬನ್ನಿ, ಎದ್ದೋಡಿ ಬನ್ನಿ, ಕನ್ನಡದ ಜಲ ಒಂದೇ, ನೆಲ ಒಂದೇ, ಬಲ ಒಂದೇ, ಜಯ ಒಂದೇ, ಛಲ ಒಂದೇ, ನಾಡನುಳಿಸುವದೊಂದೇ ಓಡಿ ಬನ್ನಿ, ಓ ಬೆಂಕಿ ಬಿದ್ದಿದೆ ಮನೆಗೆ, ಓಡಿ ಬನ್ನಿ" ಎಂದು ಒಬ್ಬ ಕವಿ ಹೇಳುತ್ತಾರೆ ಆ ಮಟ್ಟಕ್ಕೆ ಹೋಗುವಂತಹ ಪ್ರಸಂಗ ಬರುವುದು ಬಹುಶ ಬಹಳ ದೂರ ಇಲ್ಲ ಎಂದು ನನಗನ್ನಿಸುತ್ತದೆ ಆದ ಕಾರಣ ಇದು ಯಾವುದಕ್ಕೂ ನಾವು ಅಂಜಬೇಕಾಗಿಲ್ಲ ಇದರಲ್ಲಿ ಏನೂ ಟೀಕೆ ಮಾಡಬಾರದು, ಅವರಿಗೆ ಹೇಳಬಾರದು ಆ ಜಡ್ಜ್ ಮೆಂಟ್ ಓದಿದರೆ ಅನಿಸುತ್ತದೆ ಬಹುಶ ತಮಗೆ ಇದರಲ್ಲಿ ಅನಿಸಬಹುದು ತಾವು ನೋಡಿರಬೇಕು ಇದನ್ನೆಲ್ಲಾ ತಾವು ಓದಿರಬೇಕು ನಮ್ಮ ಶ್ರೀರಾಮ ರೆಡ್ಡಿಯವರು ಹೇಳಿದ ಹಾಗೆ ನಮ್ಮ ವಕೀಲರು ಚೆನ್ನಾಗಿ ವಾದವನ್ನು ಮಾಡಿದ್ದಾರೆ ಅದರಲ್ಲೇನೂ ಸಂಶಯವಿಲ್ಲ ವಕೀಲರು ಮಾಡಬೇಕಾದಂತಹ ಕೆಲಸವನ್ನೆಲ್ಲಾ ಮಾಡಿದರು ಸುಮ್ಮನೇ ನಾವು ವಕೀಲರ ಮೇಲೆ ಏನಾದರೂ ಒಂದು ಅನ್ನುವುದು ಆ ವಕೀಲರು ಹಾಗೆ ಮಾಡಿದರು, ಹೀಗೆ ಮಾಡಿದರು ಎನ್ನುವುದು ತಪ್ಪಾಗುತ್ತದೆ ಆದರೆ ಅವರು ರಾಗ ದ್ವೇಷಗಳನ್ನು ಇಟ್ಟುಕೊಂಡು ಕುಳಿತಿರುವವನು, ಜಡ್ಜ್‌ಮೆಂಟ್ ಹೀಗೆಯೇ ಬರೆಯಬೇಕೆಂದು ಕುಳಿತುಕೊಂಡಿರುವವನನ್ನು ನೀವು ಏನು ಮಾಡಬಹುದು? ಏನೂ ಮಾಡುವುದಕ್ಕೆ ಆಗುವುದಿಲ್ಲ ಯಾವ ಕಾಲಕ್ಕೂ ಏನೂ ಮಾಡುವುದಕ್ಕೆ ಆಗುವುದಿಲ್ಲ ಇಲ್ಲಿ ತಮಿಳುನಾಡು ಪೋಲು ಮಾಡುತ್ತಿರುವ ನೀರಿನ ವಿಚಾರವನ್ನು ಮಾನ್ಯ ಈಶ್ವರಪ್ಪನವರೇ ಪುಸ್ತಕದಲ್ಲಿ ಬರೆಯುತ್ತಾರೆ 340 ಟಿ ಎಂ ಸಿ ನೀರನ್ನು ತಮಿಳುನಾಡಿನವರು ಈಗ ಪೋಲು ಮಾಡುತ್ತಿದ್ದಾರಂತೆ

340 ಟಿ ಎಂ ಸಿ ನೀರು ಪೋಲಾಗುತ್ತದೆ ಅದು ಯಾರೂ ಹೇಳಿದ್ದಲ್ಲ ಕಾವೇರಿ ಸತ್ಯ ಶೋಧನಾ ಸಮಿತಿ ಹಾಗೂ ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ವರದಿ ನೀಡಿರುವ ಮಾಹಿತಿಯ ಪ್ರಕಾರ, ತಮಿಳುನಾಡಿನಲ್ಲಿ 340 ಟಿ ಎಂ ಸಿ ನೀರು ವ್ಯರ್ಥವಾಗಿ ಸಮುದ್ರಕ್ಕೆ ಸೇರುತ್ತಿದೆ ವಿಶ್ವ ಸಂಸ್ಥೆಯವರು ಬಂದು ಅಧ್ಯಯನ ಮಾಡಿ ಹೇಳಿದಂತಹ ವರದಿ ಇದು ನೀರು ಎಲ್ಲೆಲ್ಲಿ ಹೋಗುತ್ತದೆ ಎಂದು ಕೂಡ ಅವರು ಹೇಳಿದ್ದಾರೆ ಕೊಲೆರೋಂ ಕೆಳ ಅಣೆಕಟ್ಟಿನಿಂದ ಹರಿದು ಹೋಗುವ ಹೆಚ್ಚುವರಿ ನೀರು 102 ಟಿ ಎಂ ಸಿ ಟೈಲ್ ಅಂಡ್ ರೆಗ್ಯುಲೇಟರ್ ಗಳಿಂದ ಆಗುವ ಸೋರಿಕೆ 88 ಟಿ ಎಂ ಸಿ ನದಿ ಮುಖದ ಭೂಮಿಯ ಅಂತರ್ಜಲ 150 ಟಿ ಎಂ ಸಿ ಇಷ್ಟು ನೀರು ಸೋರಿ ಹೋಗುತ್ತದಂತೆ ಇದನ್ನು ಉಳಿಸಿಕೊಳ್ಳಿ ಎಂದು ಅವರು ಹೇಳಿ ಹೋಗಿದ್ದಾರೆ ಇದನ್ನು ಉಳಿಸಿಕೊಳ್ಳಲು ಅವರು ಏಕೆ ಬೇಡ ಎನ್ನುತ್ತಾರೆ ಎನ್ನುವುದನ್ನು ಕೂಡ ಇದರಲ್ಲಿ ಹೇಳುತ್ತಿದ್ದಾರೆ "ಇದುವರೆಗೆ ಬಳಸಿಕೊಳ್ಳದಿದ್ದ ಈ ಜಲ ಸಂಪಲನ್ಮೂಲವನ್ನು ಸತತವಾಗಿ ಬಳಸಿಕೊಂಡಲ್ಲಿ ತಮಿಳುನಾಡು ಪೋಲು ಮಾಡಿಕೊಳ್ಳುತ್ತಿರುವ ಪ್ರಮಾಣವನ್ನು ಕಡಿಮೆ ಮಾಡುವುದು ಅಷ್ಟೇ ಅಲ್ಲದೇ, ಮಳೆ ನೀರನ್ನು ಜಲಾಶಯಗಳಿಗೆ ಸೇರಿಸುವುದರ ಮೂಲಕ ಪ್ರತಿ ವರ್ಷ ಮಳೆಯ ನೀರಿನ ಪ್ರಮಾಣವನ್ನು ಅವರು ಪೂರ್ಣವಾಗಿ ಬಳಸಿಕೊಳ್ಳಬಹುದು ಹಾಗೆ ಉಳಿಸಿದ ನೀರು ಮೇಲ್ಭಾಗದ ರಾಜ್ಯಗಳ ರೈತರ ಸಹಾಯಕ್ಕೆ ಒದಗಿದಂತಾಗುತ್ತದೆ ಆದರೆ ಇಂತಹ ಯೋಜನೆಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಅಪಾರ ಹಣ ವ್ಯಯ ಆಗುತ್ತದೆ ಎಂಬ ನೆವದಿಂದ ತಮಿಳುನಾಡು ಈ ಜಲ ಸಂಪನ್ಮೂಲವನ್ನು ಬಳಸಿಕೊಳ್ಳಲು ತಯಾರಿಲ್ಲ" ಇದಕ್ಕೆ ಹೆಚ್ಚು ಖರ್ಚು ಬರುತ್ತದೆಂದು ಅವರು ಮಾಡಲಿಕ್ಕೆ ತಯಾರಿಲ್ಲ ಈ ರೀತಿಯಾಗಿ ಸುಮಾರು 340 ಟಿ ಎಂ ಸಿ ನೀರು ಇವತ್ತು ಸೋರಿ ಹೋಗುತ್ತಿದೆ ಎನ್ನುವ ಮಾತನ್ನು ಕೂಡ ಇದರಲ್ಲಿ ಬರೆಯುತ್ತಿದ್ದಾರೆ ಆಮೇಲೆ ಒಂದು ಮಾಹಿತಿಯ ಪ್ರಕಾರ 129 ಟಿ ಎಂ ಸಿ ಅಂತರ್ಜಲ ನೀರು ಇದೆ ಎಂದು ಹೇಳುತ್ತಿದ್ದಾರೆ ತಮಿಳುನಾಡಿನವರು ಇದನ್ನು ಈಗ 47 ಟಿ ಎಂ ಸಿ ಎಂದು ಒಪ್ಪಿಕೊಳ್ಳುತ್ತಿದ್ದಾರೆ ಆದರೆ ಈ ಅಧ್ಯಯನ ಹೇಳುತ್ತಿದೆ 129 ಟಿ ಎಂ ಸಿ ಅಂತರ್ಜಲ ನೀರು ತಮಿಳುನಾಡಿನಲ್ಲಿದೆ ಎಂದು ಇಲ್ಲಿ ಹೇಳುತ್ತಿದ್ದಾರೆ ಇದೆಲ್ಲವನ್ನೂ ಲೆಕ್ಕ ಹಾಕಿದರೆ ನಮ್ಮ ರಾಜ್ಯಕ್ಕೆ ಇಲ್ಲದ ಅನ್ಯಾಯ ಆಗಿದೆ ಆ ಕಾರಣದಿಂದ ನನಗೆ ಅನಿಸುತ್ತದೆ ಉಳಿದ ಎಲ್ಲ ವಿಚಾರವನ್ನು ಹೇಳಿದ್ದಾರೆ

ಸುಮ್ಮನೇ ಅದನ್ನೇ ನಾವು ತಿರುಗಾ ಮುರಗಾ ಹೇಳಿಕೊಳ್ಳುತ್ತಾ ಹೋದರೆ ಪ್ರಯೋಜನ ಇಲ್ಲ ನಾನು ಅದು ಯಾವುದನ್ನೂ ಹೇಳುವುದಕ್ಕೆ ಹೋಗುವುದಿಲ್ಲ ಎಲ್ಲರೂ ಕೂಡ ಹೋರಾಟ ಮಾಡಿದ್ದಾರೆ, ಬಹುಶ ಮಾನ್ಯ ವಾಟಾಳ್ ನಾಗರಾಜ್ ಅವರು ಅವತ್ತು ಹೋರಾಟ ಮಾಡಿದ ದಿವಸ ಇದನ್ನು ತರಬೇಕಾಗಿತ್ತು ಸರ್ಕಾರದವರು ನಿರ್ಣಯವನ್ನು ತರಬೇಕಾಗಿತ್ತು ಇವತ್ತು ನಾವು ವಿರೋಧ ಪಕ್ಷದವರು ಕೊಟ್ಟ ಮೇಲೆ, ಅದೂ ಬಹಳ ಗುದ್ದಾಡಿ, ಎಲ್ಲರೂ ಕೂಡಿ ಬಡಿದಾಡುವಂತಹ ಸ್ಥಿತಿ ಬಂತು ಆದರೆ ಇದನ್ನು ಮೊದಲನೆಯ ದಿವಸ ಮಾಡಬೇಕಾಗಿತ್ತು ಇದು ನೀವೇನೋ ಆಲ್ ಪಾರ್ಟಿ ಮೀಟಿಂಗ್ ನಲ್ಲಿ ಮಾಡಿ, ಎಲ್ಲೇ ಮಾಡಿ, ಆದರೆ ಅಧಿವೇಶನದಲ್ಲಿ ಆದ ತೀರ್ಮಾನಕ್ಕೆ ಇರುವ ಬೆಲೆ ಇನ್ನು ಯಾವುದಕ್ಕೂ ಬರಲಿಕ್ಕೆ ಸಾಧ್ಯವಿಲ್ಲ ಆ ಕಾರಣದಿಂದ ಇವತ್ತಾದರೂ ಸರ್ಕಾರದವರು ಒಪ್ಪಿ, ಈ ಒಂದು ನಿರ್ಣಯವನ್ನು ಒಪ್ಪಿಕೊಂಡಿದ್ದಕ್ಕೆ ಅಭಿನಂದನೆಗಳು ತಾವು ಸಹ ಆ ಭಾಗದಿಂದ ಬಂದವರು ತಮಗೆ ಏನೇ ಮನಸ್ಸಿದ್ದರೂ ಕೂಡ ಎಲ್ಲರನ್ನೂ ಕೇಳಿ ಮಾಡಬೇಕಲ್ಲ ತಮಗೆ ಮನಸ್ಸು ಇದ್ದರೂ ಅನಿವಾರ್ಯ ನೀವೇ ನೇರವಾಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಕಷ್ಟ ಆಗುತ್ತಿತ್ತು ತಮಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ ಬರುವುದಿಲ್ಲವೆಂದಲ್ಲ ಮಾನ್ಯ ಈಶ್ವರಪ್ಪನವರು ಮನಸ್ಸು ಮಾಡಿ ನಿಜವಾಗಿ ಇವತ್ತಾದರೂ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ ಇದೆಲ್ಲಾ ವಿವರವಾಗಿ ಚರ್ಚೆ ಆಗಿದೆ ಆ ಕಾರಣದಿಂದ ಈ ಅನ್ಯಾಯ ಎಲ್ಲಿಂದ ಆಗಿದೆ ಎಂದು ಕೂಡ ಹೇಳುತ್ತಿದ್ದಾರೆ ಇದರಲ್ಲಿ ಅವು ಎಷ್ಟು ಕೆಟ್ಟಿದ್ದೇವೆ ಎಂದರೆ ಆ ಬ್ರಿಟಿಷರು ಕೂಡ ಹೋಗುವ ಮುಂದೆ ಈ ಮಹಾರಾಜರು ಸಾಮಂತ ಅರಸರ ಮೇಲೆ ವಿರೋಧ ಮಾಡಲಿಕ್ಕೆ ಈ ಮದ್ರಾಸನ್ನು ಹಿಡಿದುಕೊಂಡರು ಎಂದು ಬರೆಯುತ್ತಾರೆ ಆಮೇಲೆ ಮದ್ರಾಸ್ ಏನಾಗಿದೆ ಎಂದರೆ ಮೊದಲಿನಿಂದ ಅದಕ್ಕೆ ಮನ್ನಣೆ ಸಿಕ್ಕಿದೆ ಮಾನ್ಯ ನಿಜಲಿಂಗಪ್ಪನವರು A I C C President ಆದ ಮೇಲೆ, ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾದ ಮೇಲೆ ದಕ್ಷಿಣ ಭಾರತದಲ್ಲಿ ಕರ್ನಾಟಕ ಇದೆ ಎಂದು ಗೊತ್ತಾಗಿದೆ ಇಲ್ಲದೇ ಇದ್ದರೆ, ನಾವು ಮೊದಲು ಸಣ್ಣವರಿದ್ದಾಗ ಅಲ್ಲಿಗೆ ಹೋದಾಗ ಬಹುಶ ದಕ್ಷಿಣ ಭಾರತ ಎಂದರೆ ಮದ್ರಾಸ್ ಎಂದು ಕೇಳುತ್ತಿದ್ದರು ನೀವೆಲ್ಲಿಂದ ಬಂದಿರಿ ಎಂದರೆ ಮದ್ರಾಸ್‌ನವರಾ ಎಂದು ಕೇಳುತ್ತಿದ್ದರು ಕರ್ನಾಟಕದ ಗುರುತೇ ಇರಲಿಲ್ಲ ತಮಗೆ ಗೊತ್ತಿದೆ ಮಾನ್ಯ ಈಶ್ವರಪ್ಪನವರೇ ಈ ಪರಿಸ್ಥಿತಿಯಲ್ಲಿ ಅವರದ್ದು

ಕೇಂದ್ರ ಸರ್ಕಾರದ ಮೇಲೆ ಯಾವಾಗಲೂ ಒತ್ತಡ ಇದ್ದೇ ಇದೆ ಮೊದಲಿನಿಂದಲೂ ಕೂಡ ಇದೆ ಹೀಗಾಗಿ ಇವತ್ತುಅವರ ಒಂದು ಹಿಡಿತ ಕೇಂದ್ರ ಸರ್ಕಾರದ ಮೇಲೆ ಇದೆ ಈಗಲೂ ಕೂಡ ಹಿಡಿತದಲ್ಲಿ ಜಾಸ್ತಿ ಇದ್ದಾರೆ ನಾವು ಏನು ಮಾತನಾಡಿದರೂ ಅಷ್ಟೇ ಇದ್ದುದರಲ್ಲಿ, ಮೊನ್ನೆ ನಮ್ಮವರು ಹೋದಾಗ ಮಾನ್ಯ ಪ್ರಧಾನ ಮಂತ್ರಿಗಳು ಖಂಡಿತವಾಗಿ ನಾನು ಅದನ್ನು ನೋಡುತ್ತೇನೆಂದು ಹೇಳಿದ್ದಾರೆ ಕನಿಷ್ಟ ಪಕ್ಷ ನಾವೆಲ್ಲರೂ ಹೋರಾಟ ಮಾಡಬೇಕು ಇದೀಗ ಎಲ್ಲರೂ ರಾಜೀನಾಮೆ ಕೊಡಬೇಕೆಂದು ಹೇಳಿದರು ನಾನು ರಾಜೀನಾಮೆ ಕೊಡುತ್ತೇನೆ, ನೀವು ಕೊಡಿ ಎನ್ನುವ ವಿಚಾರ ಬಂತು ಯಾರೂ ರಾಜೀನಾಮೆ ಕೊಡಬೇಕಾಗಿಲ್ಲ ಪ್ರಸಂಗ ಬಂದರೆ ನಾವು ಕೌನ್ಸಿಲ್ ಮೆಂಬರ್ಸ್ ಎಲ್ಲರೂ ಕೂಡಿ ದೆಹಲಿಯ ಪಾರ್ಲಿಮೆಂಟಿಗೆ ಹೋಗಿ ಕೂಡೋಣ ಏನೇ ಆಗುವುದು ಆಗಲಿ ಕೊನೆಯದಾಗಿ ನಾವು ಹೋರಾಟಕ್ಕೆ ನಿಲ್ಲುವವರೆಗೆ ಇದು ಆಗುವುದಿಲ್ಲ ಮತ್ತು ನನ್ನ ವೈಯಕ್ತಿಕ ಅಭಿಪ್ರಾಯ ಪ್ರಕಾರ ನ್ಯಾಯ ಮಂಡಲಿಯ ಮುಂದೆ ಅರ್ಜಿ ಹಾಕುವುದರಲ್ಲಿ ಯಾವ ಅರ್ಥ ಇದೆ? ಏನಾದರೂ ಮಾಡಿ ವಿಚಾರ ಮಾಡಿ ದಯವಿಟ್ಟು ಸುಪ್ರೀಂ ಕೋರ್ಟಿಗೆ ಹೋಗಿ ಕೊನೆಯದಾಗಿ ನಾವು ಮಾಡಿಕೊಳ್ಳುವುದು ಸರಿಯಾದೀತು ಎಂದು ನನ್ನ ಕೆಲವು ಅಭಿಪ್ರಾಯದ ಪ್ರಕಾರ ನಾನು ಮಾತನಾಡುವುದು ಆ ಕಾರಣದಿಂದ ನಾನು ಇದರ ಬಗ್ಗೆ ಹೆಚ್ಚು ಏನು ಮಾತನಾಡದೇ, ಇದರಲ್ಲಿ ಆಗತಕ್ಕ ಅನ್ಯಾಯದ ಬಗ್ಗೆ ಮಾತನಾಡುತ್ತಾ ಹೋದರೆ ಬಹುಶ ಮೂರು ದಿವಸ ಮಾತನಾಡಬಹುದು, ಅಷ್ಟು ಇದೆ ಮೊದಲಿನಿಂದಲೂ, ಮಹಾರಾಜರ ಕಾಲದಿಂದಲೂ ಅನ್ಯಾಯ ಮಾಡುತ್ತಾ ಹೋಗಿದ್ದಾರೆ ಮದ್ರಾಸ್ ನವರನ್ನು ಕೇಳಿಯೇ ನಾವು ಆಣೆಕಟ್ಟು ಕಟ್ಟಬೇಕು ಮದ್ರಾಸ್ ನವರನ್ನು ಕೇಳಿಯೇ ನಾವು ಎಷ್ಟು ನೀರು ಹೆಚ್ಚಿಗೆ ಮಾಡಬೇಕೋ, ಅಷ್ಟು ಹೆಚ್ಚಿಗೆ ಮಾಡಬೇಕು ಎಂದು ಬರೆದಿದ್ದಾರೆ ಇದೆಲ್ಲಾ 1894 ಮತ್ತು 1924ರ ಒಪ್ಪಂದ ಇದನ್ನು ನೋಡಿದರೆ ನಿಜವಾಗಿ ಬಹಳ ನೋವು ಎನಿಸುತ್ತದೆ ಆ ಒಪ್ಪಂದವೇ ನಮಗೆ ಇಲ್ಲಿಯವರೆಗೆ ಹೊಡೆತ ಕೊಟ್ಟಿದೆ ಆದರೆ ದುರ್ದೈವದಿಂದ ಈ ನ್ಯಾಯ ಮಂಡಳಿ ಆದರೆ ಅದೆಲ್ಲಾ ಹೋಗಿ ನಮಗೆ ನ್ಯಾಯ ಸಿಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಪ್ರಯತ್ನ ಮಾಡಿದರೂ ಕೂಡ ಇಲ್ಲಿಯವರೆಗೂ ನಮಗೆ ನ್ಯಾಯ ಸಿಗಲಿಲ್ಲ ಆ ಕಾರಣದಿಂದ ನ್ಯಾಯದ ದೃಷ್ಟಿಯಿಂದ ಒಕ್ಕೊರಲಿನಿಂದ ರರಾವು ಮಾಡೋಣ ಅದು ಯಾವುದೇ ಹೋರಾಟಕ್ಕೆ ಕೂಡ ನಾವು

ಇಳಿಯಬೇಕಾಗಿದ್ದರೆ, ಅಂಥ ಹೋರಾಟ ಮಾಡೋಣ ಆ ರೀತಿಯಾಗಿ ಮಾಡೋಣ ಎಂದು ಹೇಳಿ ಬಹುಶ ರಾಜ್ಯದ ಜನತೆ, ಬಹುಶ ನಮ್ಮ ವಾಟಾಳ್ ನಾಗರಾಜ್ ಅವರು ಹೇಳಿದರು ಉತ್ತರ ಕರ್ನಾಟಕದವರು ಬೆಂಬಲ ನೀಡಿದರು ಎಂದು ಹೇಳಿದರು ಇಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಪ್ರಶ್ನೆ ಅಲ್ಲ ಇಲ್ಲಿ ಬಹುಶ ಇರುವುದು ಕರ್ನಾಟಕದ ನಮ್ಮೆಲ್ಲ ರೈತರ ಸಮಸ್ಯೆ ಬರೇ ಒಂದು ಕಾವೇರಿಯದಷ್ಟೇ ಅಲ್ಲ ಸಮಸ್ಯೆ ಬಹಳ ಗೊಂದಲದಲ್ಲಿದ್ದೇವೆ ಒಂದು ಕಡೆ ತುಂಗಭದ್ರಾ ಇನ್ನೊಂದು ಕಡೆ ಕೃಷ್ಣಾ, ಮಲಪ್ರಭಾ, ಮಹದಾಯಿ ಯಾವುದನ್ನೂ ಸರಳವಾಗಿ ಮಾಡಲು ನಮಗೆ ಬಿಡುತ್ತಿಲ್ಲ ಎಲ್ಲಾ ಸಂಪತ್ತು ಇದ್ದಂತಹ ರಾಜ್ಯ ಇದು ಆದರೆ ದುರ್ದೈವದಿಂದ ಅದನ್ನು ಬಳಕೆ ಮಾಡಿ ನಾವು ಉಣ್ಣುತ್ತೇವೆ ಎಂದರೆ ಅದನ್ನು ಉಣ್ಣುಗೊಡದ ಸ್ಥಿತಿ ನಮ್ಮ ಸುತ್ತಲಿನ ರಾಜ್ಯಗಳಿಂದ ಆಗುತ್ತಿದೆ ಸುತ್ತಲಿನ ರಾಜ್ಯಗಳು ಬಹಳ ತೊಂದರೆ ಕೊಡುತ್ತಿವೆ ಆ ಕಾರಣದಿಂದ ನಾವೆಲ್ಲರೂ ಹೋರಾಟ ಮಾಡಿ, ಇದಕ್ಕೆ ನ್ಯಾಯ ದೊರಕಿಸುವಂತಹ ಪ್ರಯತ್ನ ಮಾಡೋಣ ಎಂದು ಹೇಳಿ ತಮಗೆಲ್ಲಾ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

2 ಮಂತ್ರಿಗಳ ಹೇಳಿಕೆ

ವಿಷಯ ಕೊಬ್ಬರಿಗೆ ನೀಡುತ್ತಿರುವ ಸಬ್ಸಿಡಿಯನ್ನು ಇನ್ನೂ 15 ದಿವಸ ಮುಂದುವರಿಸುವ ಬಗ್ಗೆ ಹೇಳಿಕೆ

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲಸಚಿವರು) ಮಾನ್ಯ ಅಧ್ಯಕ್ಷರೆ, ಈಗ ತಾನೇ ಮಾನ್ಯ ಮಾಧುಸ್ವಾಮಿಯವರು ಈ ಬೆಂಬಲ ಬೆಲೆಯ ಆಧಾರದ ಮೇಲೆ Nafed ಕೊಳ್ಳುತ್ತಿದ್ದ ಕೊಬ್ಬರಿಯ ಮೇಲೆ ರಾಜ್ಯ ಸರ್ಕಾರ ನೀಡುತ್ತಿರುವ ಪ್ರತಿ ಕ್ವಿಂಟಾಲ್‌ಗೆ 600 ರೂಪಾಯಿ ಸಬ್ಸಿಡಿ ಯೋಜನೆ ಇಂದಿಗೆ ಮುಗಿಯುವುದೆಂಬ ಆಧಾರದ ಮೇಲೆ ತುಂಬಾ ಪ್ರಮಾಣದಲ್ಲಿ ಕೊಬ್ಬರಿ ಮಾರುಕಟ್ಟೆಗೆ ಬರುತ್ತಿದೆ ಬಹಳ ಗಂಭೀರವಾದ ಪರಿಸ್ಥಿತಿಯಾಗಿದೆ ಎಂದು ಸಹ ಹೇಳಿದ್ದಾರೆ ಈ ಸಬ್ಸಿಡಿಯನ್ನು ಇನ್ನೂ 15 ದಿವಸ ಮುಂದುವರಿಸಬೇಕೆಂಬ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ ಮುಂದಿನ ಅಂಶವನ್ನು ಗಮನಿಸಿ ಸಂಬಂಧಪಟ್ಟ ಮಂತ್ರಿಗಳು, ಉಪ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ ಮುಂದಿನ ತೀರ್ಮಾನವನ್ನು ತಿಳಿಸುತ್ತೇವೆ